ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೨, ಸಂಚಿಕೆ ೫, ಅಕ್ಟೋಬರ್ ೨೦೧೪

ಭಾಸ್ಕರಾಚಾರ್ಯ ಮತ್ತು ಲೀಲಾವತಿ
ಒಂದು ಅಪೂರ್ವ ಲೇಖನ
ಡಾ|| ಸಿ. ವಿ. ಮಧುಸೂದನ - ಪುಟ ೩

ಹೊಸಬದುಕು - ಕಥೆ
ಸೈಕಲ್ ಪಯಣ ಖ್ಯಾತಿಯ
ಶ್ರೀ ನಾಗಶೈಲ ಕುಮಾರ್ ಅವರಿಂದ - ಪುಟ ೧೪

ಮತ್ತೊಂದು ಹಣತೆಯ ಹಚ್ಚುವ

ದೀಪವಾಗೋಣ

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಈಗಿನ ಸುದ್ದಿ ... ಪು. ೧
ಸಂಪಾದಕೀಯ ... ಪು. ೩
ಭಾಸ್ಕರಾಚಾರ್ಯ - ಲೇಖನ ... ಪು. ೪

ಚಿಲುಮೆಯ ಒಳಗೆ

ಆರೋಗ್ಯ ... ಪು. ೬
ವಿಚಾರ-ವಿಹಾರ ... ಪು. ೯
ರಾಂ ರಾಮ! ಹಾಸ್ಯ ... ಪು. ೧೦

ಚಿಲುಮೆಯ ಒಳಗೆ

ಕಥಾಚಿಲುಮೆ ... ಪು. ೧೩
ರೆಸಿಪಿ ಕೊಡ್ತೀರಾ! ... ಪು. ೧೩
ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೪

ಚಿಲುಮೆಯ ಒಳಗೆ

ಪದ ಪುಂಜ ... ಪು. ೧೬
ರಂಗೋಲಿ ... ಪು. ೧೬
ಸರ್ವಂ ಮಂಗಳಮಯ (ಹಾಸ್ಯ) ... ಪು. ೧೭

ಚಿಲುಮೆಯ ಒಳಗೆ

ಹೊಸಬದುಕು – ಕಥೆ ... ಪು. ೧೪
ವಿಜ್ಞಾನ ... ಪು. ೨೧
ಅಲ್ಲಲ್ಲಿ ಏನೇನು ... ಪು. ೨೧

ಚಿಲುಮೆಯ ಒಳಗೆ

ಹಲವು ಕವನಗಳು
ಪುಟ ೧೪ ಮತ್ತು ೧೫ ರಲ್ಲಿ

ಈಗಿನ ಸುದ್ದಿ

ಸಿಡ್ನಿಯಲ್ಲಿ ಕನ್ನಡ ಕ್ಯಾರೆಯೋಕೆ ಕಾರ್ಯಕ್ರಮ – ವರದಿ

ಕಳೆದ ಸೆಪ್ಟೆಂಬರ್ ೨೭ರಂದು ಸುಗಮ ಗಾನ ಸಮಾಜ ಏರ್ಪಡಿಸಿದ್ದ ಕನ್ನಡ ಕ್ಯಾರೆಯೋಕೆ ಮತ್ತು ಶ್ರೀಯುತ ಸುದರ್ಶನ್ ಅವರಿಗೆ ಸನ್ಮಾನ ಮಾಡುವ ಕಾರ್ಯಕ್ರಮ ವಾಟಲ್ ಗ್ರೋವ್ ಸಾರ್ವಜನಿಕ ಶಾಲೆಯ ಸಭಾಂಗಣದಲ್ಲಿ ನಡೆಯಿತು. ಅದರ ಒಂದು ಪುಟ್ಟ ವರದಿ ಇಲ್ಲಿದೆ. ಸಮಿತಿಯವರು ಈ ಬಾರಿ ಸಮಯಕ್ಕೆ ಸರಿಯಾಗಿ ಸಜ್ಜಾಗಿದ್ದರೂ ಪ್ರೇಕ್ಷಕರು ತಡವಾಗಿ ಸಭೆಗೆ ಆಗಮಿಸಿದ್ದು ಬಹಳ ಶೋಚನೀಯ. ತುಂಬಿದ ಸಭೆ ಅಲ್ಲದಿದ್ದರೂ ಒಳ್ಳೆಯ ಪ್ರೇಕ್ಷಕರು ಅನ್ನಬಹುದು, ಏಕೆಂದರೆ ಗಾಯಕ ಗಾಯಕಿಯರು ಹಾಡುವಾಗ ಯಾವುದೇ ಶಬ್ದ, ಮಾತು ಇಲ್ಲದೆ ಹಾಡುಗರಿಗೆ ಅಡಚಣೆಯಿಲ್ಲದೆ ಸುಗಮವಾಗಿ ನಡೆಯಿತು. ದೀಪಕ್ ಅವರ ಮಧುರ ಕಂಠದಲ್ಲಿ "ಶರಣು ಶರಣಯ್ಯ ಶರಣು ಬೆನಕ" ಪಿಬಿಎಸ್ ನೆನಪು ಮಾಡಿಕೊಡುತ್ತಾ ನಾಂದಿಯಾದರೆ, ಚೆ.ಕಾರ್ತಿಕ್ "ಹಿಂದೂಸ್ಥಾನವು ಎಂದೂ ಮರೆಯದ" ಎನ್ನುವ ಹಾಡನ್ನು ಮುದ್ದಾಗಿ ಹಾಡಿದನು. ಶ್ರೀಧರ್ ನೊಣವಿನಕೆರೆ ಅವರು ಅಣ್ಣಾವ್ರ "ಆಕಾಶ ಭೂಮಿಗಳ" ಎನ್ನುವ ಹಾಡನ್ನು ಭಕ್ತಿಪೂರ್ವಕವಾಗಿ ಹಾಡಿದರೆ, ಅದೇ ರೀತಿ ಶ್ರೀಮತಿ ರೇಖಾ "ಇಂದು ಎನಗೆ ಗೋವಿಂದಾ" ಇಂಪಾಗಿ ಹಾಡಿದರು. ಕಾರ್ಯಕ್ರಮಕ್ಕೆ ಮೆರಗುನೀಡಿದ ಯುಗಳ ಗೀತೆ "ಶಿಲೆಗಳು ಸಂಗೀತವಾ" ಹಾಡಿದ ಕು.ಸಿಂಧು ಮತ್ತು ರಾಜೇಶ್ ಹೆಗ್ಗಡೆ ಹಾಡಿ ಜೋರು ಚಪ್ಪಾಳೆ ಗಿಟ್ಟಿಸಿದರು. ಶ್ರೀನಿವಾಸನ್ ಅವರ ಕಂಚಿನ ಕಂಠದಲ್ಲಿ "ನೂರು ಜನ್ಮಕೂ ನೂರಾರು ಜನ್ಮಕೂ" ಎಂಬ ಹಾಡು ಪ್ರೇಕ್ಷಕರಿಂದ ತುಂಬಾ ಮೆಚ್ಚುಗೆ ಪಡೆದರೆ, ನಂತರ ಹಾಡಿದ ಕು.ನಿರೀಕ್ಷ ಎಂದಿನಂತೆ ಸುಮಧುರ ಧ್ವನಿಯಲ್ಲಿ "ಹೂವು ಚೆಲುವೆಲ್ಲಾ ತಂದೆಂದಿತು" ಹಾಡಿದಳು. ಕು.ಸಂಜನ ಮತ್ತು ಶಂಕರ್ ಮಧ್ಯಸ್ಥ ಹಾಡಿದ "ತಂ ನಂ ತಂ ನಂ" ಆಯ್ಕೆಗೆ ತಕ್ಕಂತೆ ಚೆನ್ನಾಗಿ ಮೂಡಿ ಬಂದಿತು.ದಿವಾಕರ್ ಅವರು ಹಾಡಿದ "ಎಂಥಾ ಸೌಂದರ್ಯ ನೋಡು", ವಿಜೇಂದ್ರ ಹಾಡಿದ "ಒಲವಿನ ಪ್ರಿಯಲತೆ", ಶ್ರೀಮತಿ ಕೀರ್ತಿ ಹಾಡಿದ "ನೀ ಸಿಗದೆ ಬಾಳೊಂದು ಬಾಳೆ ಕೃಷ್ಣ", ಶ್ರೀಮತಿ ಭಾರ್ಗವಿ ಹಾಡಿದ "ತಂಗಾಳಿಯಲ್ಲಿ ನಾನು ತೇಲಿ ಬಂದೆ", ಅನಿಲ ಹಾಡಿದ "ಅನಿಸುತಿದೆ ಯಾಕೋ ಇಂದು" ಮತ್ತು ಬಸವರಾಜ್ ಅವರ "ಗುಡು ಗುಡಿಯಾ ಸೇದಿ ನೋಡು" ಹಾಡು ಕೇಳಿ ಕ್ಯಾರೆಯೋಕೆ ಕಾರ್ಯಕ್ರಮದ ಭವಿಷ್ಯಕ್ಕೆ ಒಳ್ಳೆಯ ಗಾಯಕರ ಪಟ್ಟಿಗೆ ಮತ್ತಷ್ಟು ಸಂಖ್ಯೆ ಹೆಚ್ಚಿತನಿಸಿತು.

ರಾಜೇಶ್ ಮತ್ತು ಶ್ರೀನಿವಾಸನ್ ಮತ್ತೆ ವೇದಿಕೆ ಏರಿ "ಮುಗಿಲ ಮಲ್ಲಿಗೆಯೋ" ಮತ್ತು "ಶ್ರೀಕಂಠಾ ವಿಷ ಕಂಠ" ಹಾಡಿದಾಗ ಮಧುರ ಧ್ವನಿಗಳು ಮತ್ತು ಸುಮಧುರ ಗೀತೆಯ ಆಯ್ಕೆ ಹಾಲು-ಜೇನಿನ ಸಮ್ಮಿಲನವಾದಂತೆ ಭಾಸವಾಯಿತು.ಇದರ ಮಧ್ಯೆ ಶಂಕರ್ ಅವರು "ಬಿಸಿಲಾದರೇನು" ಎಸ್ ಪಿ ಬಿ ಅವರ ಹಿಟ್ ಹಾಡನ್ನು ಹಾಡಿ ಮೆಚ್ಚುಗೆ ಪಡೆದರು.ಶ್ರೀ ನಾಗಶೈಲ ಕುಮಾರ್ ಅವರು ಕನ್ನಡ ಚಲನಚಿತ್ರರಂಗದ ಬಗ್ಗೆ ನಡೆಸಿದ ಕ್ವಿಸ್ ಪ್ರೇಕ್ಷಕರೆಲ್ಲರನ್ನೂ ಒಳಗೊಳ್ಳುವಂತೆ ಮಾಡಿತು.

ಮುಂದಿನ ಪುಟ ನೋಡಿ ...

ಕೇಳೋಣ

ದೀಪಾವಳಿ ಬಗ್ಗೆ ಮಕ್ಕಳಿಗೆ ಹಾಡು - ನೋಡಲು ಮೇಲಿನ ಚಿತ್ರವನ್ನು ಕ್ಲಿಕ್ ಮಾಡಿ

(Click picture to view)

ಮುಂದೆರಡು ತಿಂಗಳ ಪ್ರಮುಖ ದಿನಗಳು ಪುಟ ೩ ರಲ್ಲಿ ...

ಸ್ಥಳೀಯ ಪ್ರತಿಭೆಯಾದ ಸಿಂಧು ಹಾಡಿರುವ "ಇಂದು ಎನಗೆ ಗೋವಿಂದ ..." ಕೇಳಲು ಚಿತ್ರ ಕ್ಲಿಕ್ ಮಾಡಿ

(Click picture to view)

ನೋಡೋಣ

ಸಿಡ್ನಿಯಲ್ಲಿ ಕನ್ನಡ ಕ್ಯಾರೆಯೋಕೆ ಕಾರ್ಯಕ್ರಮ – ವರದಿ

ಅಂದಿನ ಕಾರ್ಯಕ್ರಮದ ಮತ್ತೊಂದು ಮುಖ್ಯ ಅಂಶವಾಗಿದ್ದ ಸುದರ್ಶನ್ ಅವರಿಗೆ ಸನ್ಮಾನ. ಶ್ರೀ ನಾರಾಯಣ ಅವರು ಸುದರ್ಶನ್ ಅವರನ್ನು ಪರಿಚಯಿಸುವುದರ ಮೂಲಕ ವೇದಿಕೆಗೆ ಬರಮಾಡಿಕೊಂಡರು. ಇದಕ್ಕೂ ಮೊದಲು ವೇದಿಕೆಗೆ ಶ್ರೀಮತಿ ರೇಖಾ ಶಶಿಕಾಂತ್, ಶ್ರೀ ಸಿಡ್ನಿ ಶ್ರೀನಿವಾಸ್, ಶ್ರೀ ಶ್ಯಾಮ್ ಸಿಂಗ್, ಶ್ರೀ ನಾಗಶಯನ, ಶ್ರೀ ಪರಮೇಶ್ ಅವರನ್ನು ಬರಮಾಡಿಕೊಳ್ಳಲಾಗಿತ್ತು. ಪ್ರತಿಯೊಬ್ಬರೂ ಸುದರ್ಶನ್ ಅವರ ಗುಣಗಾನ ಮಾಡಿ,ಅವರಲ್ಲಿರುವ ಕಲೆ, ಜಾಣ್ಮೆ, ಕೆಲಸ ಮಾಡುವ ವೈಖರಿ,ಅವರೊಡನೆ ಒಡನಾಟ ಎಲ್ಲರೂ ಒಬ್ಬೊಬ್ಬರಾಗಿ ವಿವರವಾಗಿ ಪರಿಚಯಿಸಿದರು. ಕಡೆಯಲ್ಲಿ ಸುದರ್ಶನ್ ಅವರಿಗೆ ಸುಗಮ ಕನ್ನಡ ಕೂಟದ ಪರವಾಗಿ ಪುಟ್ಟ ಪ್ರಶಂಸಾ ಫಲಕವನ್ನು ನೀಡಲಾಯಿತು. ಶ್ರೀಮತಿ ವೀಣಾಸುದರ್ಶನ್ ಅವರು ಸುದರ್ಶನ್ ಅವರಿಗೆ ನೀಡುತ್ತಿರುವ ಸಹಕಾರ, ಉತ್ತೇಜನ ಗಮನಿಸಿ ಅವರಿಗೂ ಕೂಡ ವೇದಿಕೆಗೆ ಕರೆದು ಹೂವಿನ ಗುಚ್ಚದೊಂದಿಗೆ ಪ್ರಶಂಸೆ ಮಾಡುವ ಅವಕಾಶ ನನಗೆ ಸಿಕ್ಕಿತು.ಇದಾದ ತಕ್ಷಣ ದೀಪಕ್ ಅವರು ಹಾಡಿದ ಏನಾಗಲೀ ಮುಂದೆ ಸಾಗುನೀ ಕುಳಿತವರೆಲ್ಲರೂ ತಾಳಕ್ಕೆ ತಕ್ಕಂತೆ ಚಪ್ಪಾಳೆ ಸಮೇತ ಮೆಚ್ಚುಗೆ ವ್ಯಕ್ತಪಡಿಸಿದರು. ಬಿಸಿ ಬಿಸಿ ಹುಗ್ಗಿ ಮತ್ತು ಪೈನಾಪಲ್ ಕೇಸರಿ ಭಾತ್ ಚುಮು ಚುಮು ಚಳಿಗೆ ಹೇಳಿ ಮಾಡಿಸಿದ ಹಾಗಿತ್ತು.

ಇಂತಹ ಒಳ್ಳೆಯ ಕಾರ್ಯಕ್ರಮಗಳಿಗೆ ಇನ್ನೂ ಹೆಚ್ಚು ಜನ ಬರುವಂತಾಗಬೇಕು ಎನ್ನುವ ಅಭಿಲಾಶೆಯೊಂದಿಗೆ ನನ್ನ ಪುಟ್ಟ ವರದಿಗೆ ಅಂತ್ಯ ಹಾಡುತ್ತಿದ್ದೇನೆ.▪

ವರದಿ: ರಾಜಲಕ್ಷ್ಮೀ ನಾರಾಯಣ



ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಬೆಳಕಿನ ಹಬ್ಬ ದೀಪಾವಳಿ. ಹಣತೆ ಹಚ್ಚಿ, ಕತ್ತಲನ್ನು ಓಡಿಸಿ, ಆ ಪ್ರಕಾಶದಲ್ಲಿ ಆನಂದ ಪಡುವ ಆ ಅನುಭವವೇ ಚೆಂದ. ದಿನವೂ ದೀಪ ಹಚ್ಚುತ್ತೇವಾದರೂ, ಅಂದು ಹಚ್ಚುವ ಸೊಡಿಲಿನಲ್ಲಿ ದಿವ್ಯತೆಯನ್ನು ಕಾಣುವ ಹಂಬಲ. ಜ್ಯೋತಿ ಬೆಳಗುವ ಆ ಕ್ರಿಯೆಯೇ ಚೈತನ್ಯದಾಯಕವಲ್ಲವೇ!

ಸಂಸ್ಕೃತಿಯ ರೀತಿ-ನೀತ್ಯಾನುಸಾರ ಮಾಡುವ ಅನೇಕ ವಿಧಾನಗಳಲ್ಲಿ ದೀಪ ಬೆಳಗುವುದೂ ಒಂದು. ಸಂಸ್ಕೃತಿಯನ್ನು ನಾವೆಷ್ಟು ಅಪ್ಪಿದ್ದೇವೆ ಎನ್ನುವುದು ಅವರವರ ಇಷ್ಟಾನುಸಾರಕ್ಕೆ ಬಿಡುವಂತಹದ್ದು. ಆದರೆ ಏಕೆ ದೀಪವನ್ನು ಬೆಳಗಬೇಕು. ಇದಕ್ಕಂತೂ ಉತ್ತರ ಸ್ಪಷ್ಟ. ಕತ್ತಲು ಬೇಡವೆಂದರೆ ದೀಪ ಬೆಳಗಿಸಿಬೇಕು.

ಹಾಗೆಯೇ, ಜ್ಞಾನವನ್ನು ಒರೆಗೆ ಹಚ್ಚಿದರೆ ವಿಜ್ಞಾನ. ನಾವುಗಳು ಹಲವು ರೀತಿಯಿಂದ ಜ್ಞಾನವನ್ನು ಸಂಪಾದಿಸುತ್ತೀವಿ. ಒಂದು ವಸ್ತುವಿನ ಅರಿವನ್ನು ಅರಿತುಕೊಳ್ಳುತ್ತೀವಿ. ನಾವು ಏನೇ ತಿಳಿದುಕೊಂಡರೂ, ಮತ್ತಷ್ಟು ಕಲಿಯುವುದಕ್ಕೆ ಸದಾ ವಸ್ತುವಿರುತ್ತದೆ. ಸುತ್ತಮುತ್ತಲಿನಲ್ಲಿನ ಆಗುಹೋಗುಗಳು, ಆಯಾ ವಿಷಯಗಳಲ್ಲಿ ಪಾಂಡಿತ್ಯ ಸಾಧಿಸಿದವರ ಒಡನಾಟ, ಇತ್ಯಾದಿಯಾಗಿ ಎಲ್ಲ ಕಡೆಯಲ್ಲೂ ಜ್ಞಾನವು ಹರಿಯುತ್ತಿರುತ್ತದೆ. ನಮ್ಮ ಮನಸ್ಸನ್ನು ತೆರೆದಿಟ್ಟುಕೊಂಡರೆ ಮಾತ್ರ, ನಮ್ಮಲ್ಲಿರುವ ಜ್ಞಾನವನ್ನು ಪ್ರಶ್ನಿಸಿಕೊಳ್ಳುವುದಕ್ಕೆ ಸಾಧ್ಯ ಮತ್ತು ಇತರರ ಅರಿವನ್ನು ಸ್ವೀಕರಿಸುವುದಕ್ಕೆ ಅವಕಾಶ. ನಮಗೆ ತಿಳಿದಿರುವುದೇ ಸತ್ಯ ಎಂಬ ಅಂಧಕಾರದಲ್ಲಿ ಇದ್ದೀವೆಂದರೆ, ಸತ್ಯದ ಹೊನಲು ನಮ್ಮನ್ನು ಉಜ್ವಲಗೊಳಿಸಲು ಸಾಧ್ಯವಾಗುವುದಿಲ್ಲ. ಅಬ್ಬಬ್ಬ ಎಂದರೆ, ಬೆಂಕಿ ಕಡ್ಡಿ ಹಚ್ಚಿದಾಗ ಒಂದಷ್ಟು ಬೆಳಕು ಬಂದು ಆರಿಹೋಗುತ್ತದೆಯಲ್ಲವೇ. ಅಷ್ಟು ಹೊತ್ತು ಮಾತ್ರ ನಮ್ಮ ಜ್ಞಾನವೇ ಸರಿ ಎಂದು ವಾದಿಸಬಹುದಷ್ಟೇ. ಅದರ ಬದಲು, ಅದೇ ಬೆಂಕಿಕಡ್ಡಿಯಿಂದ, ಒಂದರ ನಂತರ ಒಂದು ದೀಪ ಹಚ್ಚುವಂತೆ, ನಮ್ಮಲ್ಲಿರುವ ಜ್ಞಾನದ ಕಿಡಿಯನ್ನು ಇತರರಿಗೂ ಕೊಟ್ಟು ಅವರಲ್ಲಿರುವ ಜ್ಞಾನದ ತೇಜಸ್ಸನ್ನು ಗುರುತಿಸಿ ಮತ್ತೊಂದು ದೀಪ ಬೆಳಗುವುದಕ್ಕೆ ಅನುವು ಮಾಡಿಕೊಟ್ಟರೆ, ನಮ್ಮ ಬದುಕೇ ಲಕ್ಷ ದೀಪೋತ್ಸವವಾಗುತ್ತದೆ.

ನಮ್ಮ ನಿಮ್ಮಲ್ಲಿರುವ ಸುಜ್ಞಾನದ ಬೆಳಕು, ಮನುಕುಲದ ಉದ್ಧಾರಕ್ಕೆ ಜ್ಯೋತಿಯಾಗಲಿ ಎಂದು ಆಶಿಸುತ್ತ ಹೊರನಾಡ ಚೆಲುಮೆಯ ಸಮಿತಿಯ ಪರವಾಗಿ, ಓದುಗರಿಗೆ ದೀಪಾವಳಿಯ ನಲ್ಮೆಯ ಶುಭಾಶಯಗಳನ್ನು ಕೋರುತ್ತಿದ್ದೀನಿ.

ಕತ್ತಲಿನಿಂದ ಬೆಳಕಿನೆಡೆಗೆ ಸಾಗೋಣ

ಅಕ್ಟೋಬರ್ ಶ್ರೀ ಜಯನಾಮ ಸಂವತ್ಸರ, ದಕ್ಷಿಣಾಯನ,
ಶರದ್ ಋತು, ಆಶ್ವಯುಜ/ಕಾರ್ತೀಕ ಮಾಸ

02 ಗು - ದುರ್ಗಾಷ್ಟಮಿ, ಮಹಾತ್ಮಾ ಗಾಂಧೀ ಜಯಂತಿ
03 ಶು - ಆಯುಧ ಪೂಜೆ
04 ಶ - ವಿಜಯ ದಶಮಿ
05 ಭಾ - ಬಕ್ರಿದ್
07/08 - ಹುಣ್ಣಿಮೆ
08 ಬು - ವಾಲ್ಮೀಕಿ ಜಯಂತಿ
11 ಶ - ಸಂಕಷ್ಟಹರ ಗಣಪತಿ ಪೂಜೆ
19 ಭಾ - ರಮಾ ಏಕಾದಶಿ
22 ಬು - ನರಕ ಚತುರ್ದಶಿ / ದೀಪಾವಳಿ ಆರಂಭ
23 ಗು - ದೀಪಾವಳಿ ಅಮಾವಾಸ್ಯೆ, ಲಕ್ಷ್ಮೀ ಪೂಜೆ
24 ಶು - ಬಲಿಪಾಡ್ಯಮಿ, ಕಾರ್ತೀಕ ಮಾಸ ಆರಂಭ, ಸ್ಕಂದ ಷಷ್ಠಿ
26 ಭಾ - ಮೊಹರಂ ಆರಂಭ

ಮುಂದೆರಡು ತಿಂಗಳ ಪ್ರಮುಖ ದಿನಗಳು

ನವೆಂಬರ್ ಶ್ರೀ ಜಯನಾಮ ಸಂವತ್ಸರ, ದಕ್ಷಿಣಾಯನ,
ಶರದ್/ಹೇಮಂತ ಋತು, ಕಾರ್ತೀಕ/ಮಾರ್ಗಶಿರ ಮಾಸ

1 ಶ - ಕರ್ನಾಟಕ ರಾಜ್ಯೋತ್ಸವ
03 ಸೋ - ಪ್ರಭೋದಿನಿ ಏಕಾದಶಿ
04 ಮಂ - ತುಳಸಿ ವಿವಾಹ, ಮೊಹರಮ್ ಹತ್ತನೇ ದಿನ
6 ಗು - ಗುರುನಾನಕ್ ಜಯಂತಿ
10 ಸೋ - ಸಂಕಷ್ಟಹರ ಗಣಪತಿ ಪೂಜೆ
18 ಮಂ - ಉತ್ಪನ್ನ ಏಕಾದಶಿ
21/22 ಅಮಾವಾಸ್ಯೆ
23 ಭಾ - ಮಾರ್ಗಶಿರ ಮಾಸ ಆರಂಭ

ಮಧ್ಯ ಪ್ರಾಚೀನ ಗಣಿತಜ್ಞರಲ್ಲಿ ಅಗ್ರಗಣ್ಯನಾದ ಭಾಸ್ಕರಾಚಾರ್ಯನ ೯೦೦ನೆಯ ಜನ್ಮಾಬ್ಧಿಯನ್ನು ಈ ವರ್ಷ ಭಾರತದ ಎಲ್ಲೆಡೆಯಲ್ಲೂ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಈ ಮಹಾವ್ಯಕ್ತಿಯ ಜೀವನ ಮತ್ತು ಸಾಧನೆಗಳನ್ನು ಕುರಿತು ಚಿಂತಿಸುವುದು ಪ್ರಸ್ತುತ.

ಭಾಸ್ಕರನು ಕ್ರಿ.ಶ. ೧೧೧೪ರಲ್ಲಿ ಜನಿಸಿದನೆಂದು ಅವನಿಂದ ರಚಿಸಲಾದ 'ಸಿದ್ಧಾಂತ ಶಿರೋಮಣಿ'ಯಲ್ಲಿ ಅವನೇ ಹೇಳಿಕೊಂಡಿರುವ ಈ ಶ್ಲೋಕದಿಂದ ವಿದಿತವಾಗುತ್ತದೆ.

ರಸಗುಣಪೂರ್ಣಮಹೀಸಮ ಶಕನೃಪವರ್ಷೇಽಭವೇತ್ ಮಮೋತ್ಪತ್ತಿಃ |
ರಸಗುಣ ವರ್ಷೇಣ ಮಯಾ ಸಿದ್ಧಾಂತ ಶಿರೋಮಣಿ ರಚಿತಃ ||

"ನನ್ನ ಜನ್ಮವಾದದ್ದು ೧೦೩೬ನೆಯ ಶಕವರ್ಷದಲ್ಲಿ; ನನಗೆ ೩೬ ವರ್ಷ ವಯಸ್ಸಾಗಿದ್ದಾಗ **'ಸಿದ್ಧಾಂತ ಶಿರೋಮಣಿ'** ಯನ್ನು ರಚಿಸಿದೆ."
ಶಕವರ್ಷವು ಕ್ರಿ.ಶ. ೭೮ರಲ್ಲಿ ಆರಂಭವಾಗುತ್ತದೆ, ಎಂದರೆ, ಭಾಸ್ಕರನ ಜನನವಾದದ್ದು (೭೮+೧೦೩೬ =) ಕ್ರಿ.ಶ ೧೧೧೪ ರಲ್ಲಿ ಮತ್ತು ಅವನು . **'ಸಿದ್ಧಾಂತ ಶಿರೋಮಣಿ'** ಯನ್ನು ರಚಿಸಿದ್ದು ಕ್ರಿ.ಶ.೧೧೫೦ರಲ್ಲಿ.

ಸಿದ್ಧಾಂತ ಶಿರೋಮಣಿಯಲ್ಲಿ ನಾಲ್ಕು ಭಾಗಗಳಿವೆ:

೧. ಲೀಲಾವತಿ - ಇದರಲ್ಲಿ ಅಂಕಗಣಿತ, ರೇಖಾಗಣಿತ, ಅನಿರ್ದಿಷ್ಟ ಸಮೀಕರಣಗಳು ಮುಂತಾದುವು ಅಡಕವಾಗಿವೆ
೨. ಬೀಜಗಣಿತ - ಎಂದರೆ algebra
೩. ಗ್ರಹಗಣಿತ ಅಥವಾ ಖಗೋಳಶಾಸ್ತ್ರ (astronomy)
೪. ಗೋಲಾಧ್ಯಾಯ - ಗೋಳಾಕೃತಿಯ ವಸ್ತುಗಳ (spheres) ಗಣಿತ.

ಭಾಸ್ಕರನು ತನ್ನ ತಂದೆಯು ಶಾಂಡಿಲ್ಯಗೋತ್ರದ ಮಹೇಶ್ವರ ಎಂಬ ಬ್ರಾಹ್ಮಣ ಪಂಡಿತನೆಂದೂ, ತಾನು ಜನಿಸಿದ್ದು ಸಹ್ಯಾದ್ರಿ ಪರ್ವತದ ಸಮೀಪದಲ್ಲಿದ್ದ ವಿಜ್ಜಲವೀಡ ಎಂಬ ಊರಿನಲ್ಲೆಂದೂ ತಿಳಿಸುತ್ತಾನೆ. ಈ ವಿಜ್ಜಲವೀಡವು ಇದ್ದುದು ಕರ್ನಾಟಕದಲ್ಲೋ, ಮಹಾರಾಷ್ಟ್ರದಲ್ಲೋ ಎಂಬ ವಿವಾದವಿದೆ. ಕನ್ನಡಿಗರೇನೋ ವಿಜ್ಜಲವೀಡ ಎಂದರೆ ಈಗಿನ ಬಿಜಾಪುರವೇ ಎಂದು ನಂಬುತ್ತಾರೆ.

ಲೀಲಾವತಿ

ಲೀಲಾವತಿಯು ಆ ಕಾಲದ ದೈನಂದಿನ ವ್ಯವಹಾರಕ್ಕೆ ಅಗತ್ಯವಾದ (ಮತ್ತು ಅದಕ್ಕೂ ಮಿಗಿಲಾದ) ಗಣಿತಸಂಗ್ರಹ. ಇದು ಒಂದು ಕಾಲದಲ್ಲಿ ಈ ಜಗತ್ತಿನಲ್ಲಿಯೇ ಅತ್ಯಂತ ಜನಪ್ರಿಯವಾಗಿದ್ದ ಗಣಿತ ಪಠ್ಯಪುಸ್ತಕವೆಂದರೆ ಅತಿಶಯೋಕ್ತಿಯಾಗಲಾರದು. ಈ ಪುಸ್ತಕವು ೭೦೦ ವರ್ಷಗಳ ಕಾಲ, ಎಂದರೆ ಬ್ರಿಟಿಷರು ತಮ್ಮ ವಿದ್ಯಾಭ್ಯಾಸಕ್ರಮವನ್ನು ಭಾರತದಲ್ಲಿ ಜಾರಿ ತರುವವರೆಗೆ, ಭಾರತದಾದ್ಯಂತ ಬಳಕೆಯಲ್ಲಿದ್ದಿತು.
ಲೀಲಾವತಿಯನ್ನು ಬರೆದದ್ದು ಮುದ್ರಣಪೂರ್ವ ದಿನಗಳಲ್ಲಿ. ಅದೂ ಅಲ್ಲದೆ ಬರಹದ ದಾಖಲೆಗಳಿಗೆ ಬೇಕಾದ ಸಾಮಗ್ರಿಗಳಿಗೂ, ಸಲಕರಣೆಗಳಿಗೂ ಆಗ ಕೊರತೆ. ಈ ಕಾರಣಗಳಿಂದ ಸಂಸ್ಕೃತದ ಇತರ ತಾತ್ವಿಕ ಮತ್ತು ವೈಜ್ಞಾನಿಕ ಗ್ರಂಥಗಳಂತೆ, ಲೀಲಾವತಿಯನ್ನೂ .ನೆನಪಿನಲ್ಲಿ ಸುಲಭವಾಗಿ ಇಡಲು ಸಾಧ್ಯವಾಗುವಂತಹ ಪದ್ಯದಲ್ಲಿ ಬರೆಯಲಾಗಿದೆ. ಪ್ರಶ್ನೆಯೇ ಅಗಲಿ, ಅದನ್ನು ಬಿಡಿಸುವ ಸೂತ್ರವೇ ಅಗಲಿ, ಇದರಲ್ಲಿನ ಪ್ರತಿಯೊಂದು ಶ್ಲೋಕದ ಒಂದು ಮುಖ್ಯ ವಿಶಿಷ್ಟತೆ ಎಂದರೆ ಸಂಕ್ಷಿಪ್ತತೆ. ಈ ಸಂಕ್ಷಿಪ್ತತೆಯಿಂದ ಹಲವು ಬಾರಿ ಶ್ಲೋಕಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಸುಲಭವಾದ ಸಂಸ್ಕೃತ ಗದ್ಯದಲ್ಲಿ ಬರೆದಿರುವ ಗಣೇಶ ದೈವಜ್ಞನ "**ಬುದ್ಧಿವಿಲಾಸಿನಿ**", ಮಹೀಧರನ "**ಲೀಲಾವತಿ ವಿವರಣಂ**" ಮುಂತಾದ ಭಾಷ್ಯಗಳು ಗ್ರಂಥವನ್ನು ಅರ್ಥಮಾಡಿಕೊಳ್ಳಲು ಬಹಳ ಸಹಾಯ ಮಾಡುತ್ತವೆ.
ಕ್ರಿ. ಶ, ೧೫೮೬ರಲ್ಲಿ ಅಬುಲ್ ಫೈಜಿಯು (ಇವನು ಅಕ್ಬರನ ಮುಖ್ಯಮಂತ್ರಿಯಾಗಿದ್ದ ಅಬುಲ್ ಫಜಲನ ಸೋದರ) ಲೀಲಾವತಿಯನ್ನು ಪಾರಸೀ ಭಾಷೆಗೆ ತರ್ಜುಮೆ ಮಾಡಿದನು. ಇಂಗ್ಲಿಷ್ ಭಾಷೆಯ ಎರಡು ಸ್ವತಂತ್ರ ಅನುವಾದಗಳು ಕ್ರಿ.ಶ.೧೮೧೬ರಲ್ಲಿ ಪ್ರಕಟವಾದುವು. ಇವುಗಳ ಕರ್ತೃಗಳು ಹೆನ್ರಿ ಥಾಮಸ್ ಕೋಲ್ ಬ್ರೂಕ್ ಮತ್ತು ಜಾನ್ ಟೇಲರ್. ಇಬ್ಬರೂ East India Company ಗೆ ಕೆಲಸಮಾಡುತ್ತಿದ್ದವರು. ಕೋಲ್ ಬ್ರೂಕನು ಸರ್ಕಾರದ ಒಬ್ಬ ಉನ್ನತಾಧಿಕಾರಿ; ಟೇಲರನು ಕಂಪನಿಯ ಸೈನ್ಯದಲ್ಲಿನ ಒಬ್ಬ ಡಾಕ್ಟರ್.
ಲೀಲಾವತಿಯ ಆನೇಕ ಪ್ರಶ್ನೆಗಳು ಅದೇ ಹೆಸರಿನ ಒಬ್ಬ ಯುವತಿಯನ್ನು ಸಂಬೋಧಿಸಿ ಬರೆಯಲಾಗಿವೆ. ಈ ಕೆಳಗಿನ ಕಥೆಯ ಉದ್ಭವ ಪ್ರಾಯಶಃ ಈ ಹಿನ್ನೆಲೆಯಲ್ಲಿ.

(ಮುಂದಿನ ಪುಟ ನೋಡಿ ...)

ಭಾಸ್ಕರನಿಗೆ ಲೀಲಾವತಿ ಎಂಬ ಮಗಳಿದ್ದಳು. ಅವಳ ಜಾತಕದ ಪ್ರಕಾರ ಒಂದು ಶುಭದಿನದ ಸುಮುಹೂರ್ತಕ್ಕೆ ಸರಿಯಾಗಿ ಆಕೆಗೆ ಮದುವೆಯಾಗದಿದ್ದಲ್ಲಿ, ಅವಳು ಮಕ್ಕಳಿಲ್ಲದ ಅವಿವಾಹಿತೆಯಾಗಿಯೇ ಉಳಿಯುವವಳು. ಮುಹೂರ್ತವು ತಪ್ಪದಿರುವಂತೆ ಖಚಿತ ಮಾಡಿಕೊಳ್ಳುವುದಕ್ಕೋಸ್ಕರ, ಭಾಸ್ಕರನು ಒಂದು ಪುಟ್ಟ ಯಂತ್ರವನ್ನು ರಚಿಸಿದನು. ಈ ಯಂತ್ರದ ಯೋಜನೆ ಹೇಗಿತ್ತೆಂದರೆ ತಳದಲ್ಲಿ ಚಿಕ್ಕ ರಂಧ್ರವಿದ್ದ ಬಟ್ಟಲೊಂದನ್ನು ಒಂದು ದೊಡ್ಡ ಪಾತ್ರೆಯಲ್ಲಿನ ನೀರಿನಲ್ಲಿ ತೇಲು ಬಿಟ್ಟಾಗ, ನೀರು ನಿಧಾನವಾಗಿ ಆ ಬಟ್ಟಲನ್ನು ಪ್ರವೇಶಿಸಿ ನಿರ್ದಿಷ್ಟ ಮುಹೂರ್ತಕ್ಕೆ ಸರಿಯಾಗಿ ಬಟ್ಟಲು ನೀರಿನಲ್ಲಿ ಮುಳುಗುತ್ತಿತ್ತು (ಚಿತ್ರವನ್ನು ನೋಡಿ).



ದುರದೃಷ್ಟವಶಾತ್ ತನ್ನ ವಯಸ್ಸಿಗೆ ಸಹಜವಾದ ಕುತೂಹಲದಿಂದ, ಬಾಲೆ ಲೀಲಾವತಿಯು ತನ್ನ ತಂದೆಗೆ ಅರಿವಾಗದಂತೆ ಆ ಪಾತ್ರೆಯಲ್ಲಿ ಇಣಿಕಿನೋಡಿದಾಗ, ಅವಳ ಆಭರಣದಲ್ಲಿನ ಮುತ್ತೊಂದು ಬಿದ್ದು ಆ ಬಟ್ಟಲಿನ ರಂಧ್ರವನ್ನು ಮುಚ್ಚಿಹಾಕಿತು. ಪರಿಣಾಮವಾಗಿ ಮುಹೂರ್ತವು ಮೀರಿದರೂ ಬಟ್ಟಲು ಮುಳುಗಲಿಲ್ಲ. ಲೀಲಾವತಿಯ ಮದುವೆಯನ್ನು ನೆರವೇರಿಸಲಾಗಲಿಲ್ಲ. ದುಗುಡದಿಂದ ಕಂಗೆಟ್ಟ ಮಗಳನ್ನು ಸಂತೈಸಲು, ಭಾಸ್ಕರನು ಈ ಲೀಲಾವತಿ ಎಂಬ ಗ್ರಂಥವನ್ನು ಬರೆದನಂತೆ.

ಈ ಕಥ ಎಷ್ಟು ನಿಜವೋ ತಿಳಿಯದು; ನಿಜವಿರಲಾರದು ಎನ್ನಲು ಕೆಲವು ಕಾರಣಗಳಿವೆ:

೧. ಭಾಸ್ಕರನಾಗಲೀ, ಲೀಲಾವತಿಯ ಸಂಸ್ಕೃತ ಭಾಷ್ಯಕಾರರಾಗಲೀ ಈ ಕಥೆಯನ್ನು ಪ್ರಸ್ತಾಪಿಸಿಲ್ಲ.

೨. ಲೀಲಾವತಿಯ ಕೆಲವು ಸಮಸ್ಯೆಗಳು ಮಾತ್ರ ಒಬ್ಬ ಯುವತಿಯನ್ನು ಉದ್ದೇಶಿಸಿ ಬರೆಯಲಾಗಿವೆ.

೩. ಈ ಕಥೆ ಮೊದಲಿಗೆ ಕಂಡುಬರುವುದು ಅಬುಲ್ ಫೈಜಿಯ ಭಾಷಾಂತರದಲ್ಲಿ.

ಲೀಲಾವತಿಯಲ್ಲಿ ಮುಖ್ಯವಾಗಿ:ಅಂಕಗಣಿತದ ಮೂಲ ಪ್ರಕಾರಗಳಾದ ಗುಣಾಕಾರ, ಭಾಗಹಾರ, ವರ್ಗ, ವರ್ಗಮೂಲ, ಘನ, ಘನಮೂಲ. ಭಿನ್ನರಾಶಿ, ಮತ್ತು ಶೂನ್ಯದ ಬಳಕೆ; ತ್ರೈರಾಶಿಕ, ಪಂಚರಾಶಿಕ, ಇತ್ಯಾದಿಗಳು; ವಿನಿಮಯ, ಮಾರಾಟ; ವರ್ಗಸಮೀಕರಣ (ಬೀಜಗಣಿತವನ್ನು ಬಳಸದೆ); ವ್ಯಕ್ತಿಭೇದಗಣಿತ ಅಥವಾ ಚಿತಿವ್ಯವಹಾರ (permutations and combinations);ಶ್ರೇಢೀವ್ಯವಹಾರ (series and progressions); ಕ್ಷೇತ್ರವ್ಯವಹಾರ (ರೇಖಾಗಣಿತ); ಅನಿರ್ದಿಷ್ಟ ಸಮೀಕರಣಗಳು (indeterminate equations) ಇವುಗಳನ್ನೊಳಗೊಂಡು ಒಟ್ಟು **277** ಶ್ಲೋಕಗಳಿವೆ. ಇವುಗಳಲ್ಲಿ ಕೆಲವು ಸೂತ್ರಗಳು, ಕೆಲವು ಉದಾಹರಣೆಗಳು. ಈ ಗ್ರಂಥದಲ್ಲಿರುವ ನೂರಾರು ಸಮಸ್ಯೆಗಳಲ್ಲಿ ಎರಡನ್ನು ಮಾತ್ರ ಈ ಕೆಳಗೆ ಕೊಡಲಾಗಿದೆ.

1. **ಸ್ವಪದೈರ್ನವಭಿರ್ಯುಕ್ತಃ ಸ್ಯಾಚ್ಚತ್ವಾರಿಂಶತಾಧಿಕಮ್ |**
   ಶತದ್ವಾದಶಕಂ ವಿದ್ವನ್ ಕಃ ಸ ರಾಶಿರ್ನಿಗದ್ಯತಾಮ್ ||

   *ವಿದ್ವಾನ್! ಒಂದು ಸಂಖ್ಯೆಗೆ ಅದರ ವರ್ಗಮೂಲದ ಒಂಭತ್ತಪ್ಪನ್ನು ಸೇರಿಸಿದರೆ **1240** ಆಗುತ್ತದೆ. ಆ ಸಂಖ್ಯೆ ಏನೆಂದು ತಿಳಿಸಿ.*

   ಭಾಸ್ಕರನ ವಿಧಾನ: ದತ್ತ: 1240; ಗುಣಾಂಕ **9:**

   (9/2)^2 = 20.25; 1240 + 20.25 = 1260.25; ಇದರ ವರ್ಗಮೂಲ **35.5; 35.5 - 9/2 = 31; 31^2 = 961.** ಇದೇ ಉತ್ತರ.

   ಓದುಗರು ಕೆಳಗಿನ ವರ್ಗ ಸಮೀಕರಣವನ್ನು ಬಿಡಿಸಿ ಉತ್ತರವನ್ನು ಪರಿಶೀಲಿಸಬಹುದು. ಈ ಪ್ರಶ್ನೆಗೆ ಇನ್ನೊಂದು ಉತ್ತರವೂ ಇದೆ.

   x + 9 √x = 1240

2. **ಏಕದ್ವಿತ್ರ್ಯಾದಿಯುಕ್ತಾ ಮಧುರಕಟುಕಷಾಯಾಮ್ಲಕ್ಷಾರತಿಕ್ತೈ |**
   ರೇಕಸ್ಮಿನ್‌ಷಡ್ರಸೈಃ ಸ್ಯುರ್ಗಣಕ ಕತಿ ವದ ವ್ಯಂಜನೇ ವ್ಯಕ್ತಿಬೇಧಾಃ ||

   ಹೇಳು, ಗಣಿತಜ್ಞ! ಸಿಹಿ. ಖಾರ, ಒಗರು, ಹುಳಿ,ಉಪ್ಪು ಮತ್ತು ಕಹಿ ಈ ಷಡ್‌ರಸಗಳಲ್ಲಿ ಒಂದೊಂದು, ಎರಡೆರಡು, ಮೂರು-ಮೂರು ಇತ್ಯಾದಿ ಒಮ್ಮೆಗೆ ತೆಗೆದುಕೊಂಡರೆ ಒಟ್ಟು ಎಷ್ಟು ಮಿಶ್ರಣಗಳನ್ನು ಮಾಡಬಹುದು?

   ಭಾಸ್ಕರನ ವಿಧಾನ: ರಸಗಳ ಒಟ್ಟು ಸಂಖ್ಯೆ **6; 6** ರಿಂದ **1** ರವರೆಗೆ ಸಂಖ್ಯೆಗಳನ್ನು **ಇಳಿಯುವ** ಕ್ರಮದಲ್ಲಿ ಬರೆಯಿರಿ. ಅದರ ಕೆಳಗಿನ ಸಾಲಿನಲ್ಲಿ **1** ರಿಂದ **6** ರವರೆಗೆ ಸಂಖ್ಯೆಗಳನ್ನು ಏರುವ ಕ್ರಮದಲ್ಲಿ ಬರೆಯಿರಿ. ಹೀಗೆ ಬರೆದ ನಂತರ ಎರಡು ಸಾಲಿನ ಅಂಕೆಗಳನ್ನು ಅಡ್ಡ ಗೆರೆಗಳ ಮೂಲಕ ಭಿನ್ನರಾಶಿಗಳಾಗಿ ಮಾರ್ಪಡಿಸಿ.

6	**5**	**4**	**3**	**2**	**1**
1	**2**	**3**	**4**	**5**	**6**

   ಒಂದೇ ಒಂದು ರಸದ "ಮಿಶ್ರಣ" ಗಳ ಸಂಖ್ಯೆ ಬೇಕಾದರೆ, ಅದು ಮೊದಲಿನ ಭಿನ್ನರಾಶಿ, ಎಂದರೆ **6/1 = 6.**

(ಮುಂದಿನ ಪುಟ ನೋಡಿ ...)

ಎರಡೆರಡು ರಸಗಳ ಮಿಶ್ರಣ ಗಳ ಸಂಖ್ಯೆ: **(6/1) x (5/2) = 15**

ಮೂರು-ಮೂರು ರಸಗಳ ಮಿಶ್ರಣ ಗಳ ಸಂಖ್ಯೆ: **(6/1) x (5/2) x (4/3) = 20**

ನಾಲ್ಕು-ನಾಲ್ಕು ರಸಗಳ ಮಿಶ್ರಣ ಗಳ ಸಂಖ್ಯೆ: **(6/1) x (5/2) x (4/3) x (3/4) = 15**

ಐದು-ಐದು ರಸಗಳ ಮಿಶ್ರಣ ಗಳ ಸಂಖ್ಯೆ: **(6/1) x (5/2) x (4/3) x (3/4) x (2/5) = 6**

ಆರೂ ರಸಗಳ ಮಿಶ್ರಣದ ಸಂಖ್ಯೆ = **1**

ಒಟ್ಟು ಮಿಶ್ರಣ ಗಳ ಸಂಖ್ಯೆ = **63**

ಒಟ್ಟು ಮಿಶ್ರಣ ಗಳ ಸಂಖ್ಯೆ = **63** ಎಂಬುದನ್ನು ಭಾರತದ ಪ್ರಾಚೀನ ಶಸ್ತ್ರಚಿಕಿತ್ಸಕನಾದ ಸುಶ್ರುತನೂ (ಕ್ರಿ. ಪೂ. ೬ನೆಯ ಶತಮಾನ) ಪ್ರಾಚೀನ ವೈದ್ಯನಾದ ಚರಕನೂ (ಕ್ರಿ. ಪೂ. ೩ನೆಯ ಶತಮಾನ) ಬಹಳ ಹಿಂದೆಯೇ ಮನಗಂಡಿದ್ದರು. ಇದು ಮಾತ್ರವಲ್ಲ, ಸುಶ್ರುತನು ತನ್ನ ಸಂಹಿತೆಯಲ್ಲಿ **63** ಮಿಶ್ರಣಗಳನ್ನೂ ಪಟ್ಟಿಮಾಡಿದ್ದಾನೆ!■

(ಈ ಲೇಖನದ ಕೆಲವು ಭಾಗಗಳು ಮಾತ್ರ ಇದೇ ಲೇಖಕರ September 2014 ಪೂರ್ವಾರ್ಧದ Indian Link ಪತ್ರಿಕೆಯಲ್ಲಿ Bhaskaracharya and his Leelavathi ಎಂಬ ಇಂಗ್ಲಿಷ್ ಲೇಖನದಲ್ಲಿ ಪ್ರಕಟವಾಗಿವೆ)



ದಾಲ್ಚಿನ್ನಿ (ಚಕ್ಕೆ)

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

ಎಡಗಡೆ ಇರುವುದು ಸಿಲೋನ್ (ತಾಜಾ) ಸಿನ್ನಮನ್, ಬಲದಲ್ಲಿರುವುದು ಕಾಸಿಯ ಸಿನ್ನಮನ್

ಅತ್ಯಂತ ಪ್ರಾಚೀನ ಸಾಂಬಾರ ಪದಾರ್ಥಗಳಲ್ಲಿ ದಾಲ್ಚಿನ್ನಿ ಕೂಡ ಒಂದು. ಕ್ರಿಸ್ತ ಪೂರ್ವ2700 ರಲ್ಲೇ ಇದನ್ನು ಪಾನೀಯಗಳಲ್ಲೂ ಮತ್ತು ಔಷಧಿಯಾಗಿಯೂ ಉಪಯೋಗಿಸುತ್ತಿದ್ದರಂತೆ. ಸಸ್ಯಶಾಸ್ತ್ರೀಯವಾಗಿ ಇದರ ಹೆಸರು ಸಿನ್ನಮೊಮುಮ್ (Cinnamomum), ಲಾರೇಸಿ (Lauraceae) ಕುಟುಂಬಕ್ಕೆ ಸೇರಿದ್ದು. ಪಾಶ್ಚಿಮಾತ್ಯ ದೇಶಗಳಲ್ಲಿ ಬಹು ಜನಪ್ರಿಯತೆಗಳಿಸುವಲ್ಲಿ ಎರಡನೆಯ ಸ್ಥಾನ ಪಡೆದಿದೆ (ಮೊದಲನೆಯ ಸ್ಥಾನ ಕರಿಮೆಣಸಿಗೆ). ಸಿನ್ನಮನ್ (Cinnamon) ಹೆಸರಿನ ಮೂಲ ಗ್ರೀಕ್ ಭಾಷೆಯ ಕಿನ್ನಮೋಮನ್ kinnamomon. ಸಂಸ್ಕೃತದಲ್ಲಿ ತಮಾಲಪತ್ರಂ (Cinnamomum tamala) ಎಂದೂ, ಹಿಂದಿಯಲ್ಲಿ ದಾಲ್ಚೀನಿ, ಮಲೆಯಾಳಂನಲ್ಲಿ ಕರುವ, ತಮಿಳಿನಲ್ಲಿ ಪಟ್ಟಿ ಎಂದೂ ಕರೆಯುತ್ತಾರೆ.

ದಾಲ್ಚಿನ್ನಿಯನ್ನು ಸಿನ್ನಮನ್ ಜಾತಿಗೆ ಸೇರಿದ ಹಲವಾರು ಮರಗಳ ತೊಗಟೆಯಿಂದ ತೆಗೆಯುತ್ತಾರೆ. ಆದರೆ ಅಂಗಡಿಗಳಲ್ಲಿ ದೊರಕುವ ದಾಲ್ಚಿನ್ನಿ ಕೇವಲ ಎರಡು ಜಾತಿಗೆ ಸೇರಿದ್ದು.

1. ಸಿನ್ನಮೋಮುಮ್ ವೇರಮ್ (cinnamomum verum), ಸಿಲೋನ್ ಸಿನ್ನಮನ್ ಎಂದು ಕರೆಯುತ್ತಾರೆ. ಇದು ತಾಜಾ ದಾಲ್ಚಿನ್ನಿ, ಅತಿ ದುಬಾರಿ ಮತ್ತು ಸಿಹಿ.
2. ಸಿನ್ನಮೋಮುಮ್ ಅರೋಮಾಟಿಕಂ (cinnamomum aromaticum) ಕ್ಯಾಸಿಯ ಸಿನ್ನಮನ್ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಅಂಗಡಿಗಳಲ್ಲಿ ಸಿಗುವ ದಾಲ್ಚಿನ್ನಿ ಕ್ಯಾಸಿಯ ಜಾತಿಗೆ ಸೇರಿದ್ದು, ಅಗ್ಗ ಬೆಲೆ. ಸಂಶೋಧನೆಗಳಲ್ಲಿ ಮತ್ತು ಅಧ್ಯಯನಗಳಲ್ಲಿ ಉಪಯೋಗಿಸಿರುವುದು ಕ್ಯಾಸಿಯ ಜಾತಿಗೆ ಸೇರಿದ ದಾಲ್ಚಿನ್ನಿಯನ್ನು.

ಸಿಲೋನ್ ಮತ್ತು ಕ್ಯಾಸಿಯದ ದಾಲ್ಚಿನ್ನಿ ಪುಡಿ ನೋಡಿದರೆ ಏನೂ ವ್ಯತ್ಯಾಸ ಕಾಣುವುದಿಲ್ಲ. ಆದರೆ ಚಕ್ಕೆ ನೋಡಿದರೆ ಸುಲಭವಾಗಿ ಪತ್ತೆಹಚ್ಚಬಹುದು. ಸಿಲೋನ್ ಸಿನ್ನಮನ್ ನಲ್ಲಿ ಅನೇಕ ತೆಳು ಪದರುಗಳ ಸುರುಳಿಗಳಿರುತ್ತವೆ. ಕ್ಯಾಸಿಯ ಸಿನ್ನಮನ್ ಒಂದೇ ಒಂದು ಗಟ್ಟಿ ತೊಗಟಿನ ಸುರುಳಿ (ಚಿತ್ರ ನೋಡಿ).

ಆಯುರ್ವೇದದ ಪ್ರಕಾರ ದಾಲ್ಚಿನ್ನಿಯ ರುಚಿ ಸಿಹಿ, ಕಹಿ ಮತ್ತು ಘಾಟು. ಬಾಯಿಯಲ್ಲಿ ಜೊಲ್ಲು ಉತ್ಪತ್ತಿಯಾಗುವಂತೆ ಮಾಡುತ್ತದೆ. ನಿಮಗೆ ತಿಳಿದಿರುವಂತೆ ಬಾಯಿಯಲ್ಲಿ ಜೊಲ್ಲು ಉತ್ಪತ್ತಿಯಾಗದಿದ್ದರೆ ಯಾವುದೇ ಗಟ್ಟಿ ಆಹಾರವನ್ನು ಸೇವಿಸಲಾಗುದಿಲ್ಲ.

ಉಪಯೋಗಗಳು

ದಾಲ್ಚಿನ್ನಿಯನ್ನು ಭಾರತದಲ್ಲಿ ಅನೇಕಾನೇಕ ಮಸಾಲೆ ಪದಾರ್ಥಗಳಲ್ಲಿ ಉಪಯೋಗಿಸುತ್ತಾರೆಂದು ನಿಮಗೆ ಗೊತ್ತೇ ಇದೆ. ಶುಂಟಿ, ಚಕ್ಕೆ, ಏಲಕ್ಕಿ ಹಾಕಿದ ಚಹಾ ಅತ್ಯಂತ ಜನಪ್ರಿಯ. ಪರ್ಷಿಯ, ಟರ್ಕಿ ಮತ್ತಿತರ ದೇಶಗಳಲ್ಲಿ ಪಾನೀಯಗಳಿಗೆ, ಸಿಹಿ ಪದಾರ್ಥಗಳಿಗೆ, ಮಾಂಸಾಹಾರಗಳಿಗೆ ಸುವಾಸನೆಗಾಗಿ ದಾಲ್ಚಿನ್ನಿಯನ್ನು ಉಪಯೋಗಿಸುತ್ತಾರೆ. ಪಾಶ್ಚಿಮಾತ್ಯ ದೇಶಗಳಲ್ಲಿ ದಾಲ್ಚಿನ್ನಿ ಮತ್ತು ಸಕ್ಕರೆ ಮಿಶ್ರಣವನ್ನು ಅಂಗಡಿಗಳಲ್ಲಿ ಮಾರುತ್ತಾರೆ. ಈ ಮಿಶ್ರಣವನ್ನು ಟೋಸ್ಟ್ ಮೇಲೆ, ಬೇಯಿಸಿದ ಸೇಬು ಮತ್ತು ಪೇರ್ ಹಣ್ಣುಗಳ ಮೇಲೆ ಸಿಂಪಡಿಸುತ್ತಾರೆ. Chocolate, apple pie, doughnut, cinnamon bun, candy ಮುಂತಾದವುಗಳ ತಯಾರಿಕೆಯಲ್ಲಿ ದಾಲ್ಚಿನ್ನಿ ಪುಡಿಯನ್ನು ಉಪಯೋಗಿಸುತ್ತಾರೆ. ಸುವಾಸನೆಗಾಗಿ ಮದ್ಯಪಾನೀಯಗಳಿಗೂ ಸೇರಿಸುತ್ತಾರೆ.

ಆರೋಗ್ಯಪೂರಕ ಮತ್ತು ಔಷಧೀಯ ಗುಣಗಳು

ದಾಲ್ಚಿನ್ನಿಯಲ್ಲಿ ದೇಹರಕ್ಷಕ anti-oxidant ಇದೆ. ದಾಲ್ಚಿನ್ನಿಯ ಅನೇಕ ಔಷಧೀಯ ಗುಣಗಳಿಗೆ ಕಾರಣ cinnamaldehyde, cinnamyl acetate ಮತ್ತು cinnamyl alcohol ಎಂಬ ರಾಸಾಯನಿಕಗಳು.

ದಾಲ್ಚಿನ್ನಿಯನ್ನು ಉಪಯೋಗಿಸುವುದರಿಂದ ರಕ್ತದಲ್ಲಿನ ಸಕ್ಕರೆಯ ಮತ್ತು ಕೊಲೆಸ್ಟಿರಾಲ್ ಪ್ರಮಾಣವನ್ನು ಕಡಿಮೆಗೊಳಿಸಬಹುದು ಎಂದು ಕೆಲವು ಅಧ್ಯಯನಗಳಿಂದ ತಿಳಿದುಬಂದಿದೆ. ಮೇರಿಲ್ಯಾಂಡ್ ನ USDA ಸಂಶೋಧನಾ ಕೇಂದ್ರದ ಸಂಶೋಧಕರು ಪಾಕಿಸ್ತಾನದಲ್ಲಿ ಕೈಕೊಂಡ ಒಂದು ಅಧ್ಯಯನದ ಬಗ್ಗೆ ಇಲ್ಲಿ ತಿಳಿಸುತ್ತೇನೆ[1].

ಮುಂದಿನ ಪುಟ ನೋಡಿ ...

ಟೈಪ್ 2 ಡಯಾಬಿಟಿಸ್ ಇರುವ 60 ಜನರನ್ನು 6 ಗುಂಪುಗಳನ್ನಾಗಿ ವಿಂಗಡಿಸಿದರು. 3 ಗುಂಪಿಗೆ ದಿನಕ್ಕೆ 1 ಗ್ರಾಂ (1/4 ಟೀ ಚಮಚ), 3 ಗ್ರಾಂ ಅಥವಾ 6 ಗ್ರಾಂ ದಾಲ್ಚಿನ್ನಿ ಪುಡಿಯ ಕ್ಯಾಪ್ಸೂಲ್ ಗಳನ್ನು ಸೇವಿಸಲು ಕೊಟ್ಟರು. ಇನ್ನುಳಿದ 3 ಗುಂಪಿಗೆ ಹಿಟ್ಟು ತುಂಬಿದ (placebo) ಕ್ಯಾಪ್ಸೂಲ್ ಗಳನ್ನು ನೀಡಿದರು. 40 ದಿನಗಳ ಬಳಿಕ ದಾಲ್ಚಿನ್ನಿ ಪುಡಿ ಸೇವಿಸಿದವರಲ್ಲಿ ರಕ್ತದಲ್ಲಿನ ಸಕ್ಕರೆಯ ಪ್ರಮಾಣ 18% ರಿಂದ 29%, ಕೊಲೆಸ್ಟಿರಾಲ್ ಪ್ರಮಾಣ 12% ರಿಂದ 26% ಇಳಿದಿತ್ತು. ದಾಲ್ಚಿನ್ನಿ ಚಿಕಿತ್ಸೆಯನ್ನು ನಿಲ್ಲಿಸಿದ 20 ದಿನಗಳ ನಂತರವೂ ಈ ಪರಿಣಾಮ ಮುಂದುವರಿಯಿತು. ದಾಲ್ಚಿನ್ನಿಯ ಈ ಗುಣವನ್ನು ಮರು ಪರೀಕ್ಷಿಸಲು ಹಲವಾರು ಅಧ್ಯಯನಗಳನ್ನು ನಡೆಸಿದರು. ಕೆಲ ಅಧ್ಯಯನಗಳಲ್ಲಿ ಮಾತ್ರ ರಕ್ತದಲ್ಲಿನ ಸಕ್ಕರೆಯ ಪ್ರಮಾಣ ಕಡಿಮೆಯಾಯಿತು, ಕೆಲ ಅಧ್ಯಯನಗಳಲ್ಲಿ ಇಲ್ಲ. ಎಲ್ಲ ಅಧ್ಯಯನಗಳಲ್ಲೂ ಕ್ಯಾಸಿಯ ಸಿನ್ನಮನ್ ಅನ್ನು ಉಪಯೋಗಿಸಿದ್ದರು.

ದಾಲ್ಚಿನ್ನಿಯ ಬಗ್ಗೆ ಕೈಕೊಂಡ ಎಲ್ಲ ಸಂಶೋಧನೆಗಳನ್ನೂ ಮತ್ತು ಅಧ್ಯಯನಗಳನ್ನೂ ಪರಿಶೀಲಿಸಿ, ದಾಲ್ಚಿನ್ನಿ ರಕ್ತದ ಸಕ್ಕರೆಯ ಪ್ರಮಾಣವನ್ನು ತಗ್ಗಿಸಬಹುದು, ಆದರೆ ನಿರ್ದಿಷ್ಟವಾದ ಪ್ರಮಾಣ ತಿಳಿದಿಲ್ಲ ಎಂದು ಸಂಶೋಧಕರು ಹೇಳಿಕೆ ಕೊಟ್ಟಿದ್ದಾರೆ. ದಿನಕ್ಕೆ ಮೂರು ಅಥವಾ ಆರು ಗ್ರಾಂ ನಷ್ಟು ದಾಲ್ಚಿನ್ನಿಯನ್ನು ಆಹಾರ ಪದಾರ್ಥಗಳಲ್ಲಿ ಮತ್ತು ಪಾನೀಯಗಳಲ್ಲಿ ಉಪಯೋಗಿಸಬಹುದು. **ಆದರೆ ದಾಲ್ಚಿನ್ನಿ ಪುಡಿ, ಮಾತ್ರೆ ಅಥವಾ ಕ್ಯಾಪ್ಸೂಲ್ ಗಳನ್ನು ಸೇವಿಸಬಾರದು.** ಏಕೆಂದರೆ ಹೆಚ್ಚು ಪ್ರಮಾಣದಲ್ಲಿ ದಾಲ್ಚಿನ್ನಿಯನ್ನು ಸೇವಿಸುವುದರಿಂದ ಅಪಾಯವಿದೆ.

ಅಪಾಯ ಮತ್ತು ಮುನ್ನೆಚ್ಚರಿಕೆ

ದಾಲ್ಚಿನ್ನಿಯ ಸೇವನೆ ಮಿತಿ ಮೀರಿದಲ್ಲಿ ಎದೆಯ ಬಡಿತ ಹೆಚ್ಚಾಗಬಹುದು, ಹೊಟ್ಟೆ ನೋವು ಉಂಟಾಗಬಹುದು, ಪಿತ್ತಜನಕಾಂಗಕ್ಕೆ (liver) ಹಾನಿಯಾಗಬಹುದು. ಇದು ರಕ್ತ ಹೆಪ್ಪುಗಟ್ಟುವುದನ್ನು ತಡೆಯುತ್ತದೆ, ಆದ್ದರಿಂದ ಗರ್ಭಿಣಿಯರು ಮತ್ತು Coumadin (warfarin) ಮಾತ್ರೆ ಸೇವಿಸುವವರು ದಾಲ್ಚಿನ್ನಿ ಪುಡಿಯನ್ನು ಉಪಯೋಗಿಸಬಾರದು. ಇದಕ್ಕೆ ಕಾರಣ ದಾಲ್ಚಿನ್ನಿಯಲ್ಲಿರುವ coumarin ಎಂಬ ರಾಸಾಯನಿಕ. Coumarin ಪ್ರಮಾಣ ಕ್ಯಾಸಿಯ ಸಿನ್ನಮನ್ ನಲ್ಲಿ ಅತಿ ಹೆಚ್ಚು ಮತ್ತು ಸಿಲೋನ್ ಸಿನ್ನಮನ್ ನಲ್ಲಿ ಅತಿ ಕಡಿಮೆ ಇರುತ್ತದೆ. ಆದ್ದರಿಂದ ಹಾನಿಕಾರಕ Coumarin ಪ್ರಮಾಣ ಅತ್ಯಂತ ಕಡಿಮೆ ಇರುವ ಸಿಲೋನ್ ಸಿನ್ನಮನ್ ಉಪಯೋಗಿಸುವುದು ಒಳ್ಳೆಯದು.

ದಾಲ್ಚಿನ್ನಿಯ ಸೇವನೆ ಮಿತಿ ಮೀರುವುದು ದಾಲ್ಚಿನ್ನಿ ಪುಡಿ, ಮಾತ್ರೆ ಅಥವಾ ಕ್ಯಾಪ್ಸೂಲ್ ಗಳನ್ನು ಸೇವಿಸಿದಾಗ ಮಾತ್ರ. ಅಡಿಗೆ ಮಾಡುವಾಗ, ಮಸಾಲೆ ಪುಡಿ ತಯಾರಿಸುವಾಗ ಹೆಚ್ಚು ದಾಲ್ಚಿನ್ನಿ ಉಪಯೋಗಿಸಿದರೆ ರುಚಿಯೇ ಕೆಟ್ಟುಹೋಗುತ್ತದೆ. ನೆನಪಿಡಿ: ಅತಿಯಾದರೆ ಅಮೃತವೂ ವಿಷ.

Coumarin ಅನ್ನು ಸುವಾಸನೆಗಾಗಿ ಸಂಸ್ಕರಿತ ಆಹಾರಗಳಲ್ಲೂ, ಮದ್ಯಪಾನೀಯಗಳಿಗೂ ಮತ್ತು ಸಿಗರೇಟಿನಲ್ಲೂ ಸೇರಿಸುತ್ತಾರೆ. ಪಿತ್ತಜನಕಾಂಗಕ್ಕೆ (liver) ಹಾನಿ ಮಾಡುವುದರಿಂದ ಯುನೈಟೆಡ್ ಸ್ಟೇಟ್ಸ್ ನಲ್ಲಿ Coumarin ಉಪಯೋಗಿಸುವುದನ್ನು ನಿಷೇಧಿಸಿದ್ದಾರೆ. ಯೂರೋಪಿನಲ್ಲಿ ಬಗೆ ಬಗೆಯ ಆಹಾರ ಪದಾರ್ಥಗಳಿಗೆ ಇಂತಿಷ್ಟೇ ಪ್ರಮಾಣದಲ್ಲಿ Coumarin ಹಾಕಬಹುದೆಂದು ಕಾನೂನು ಮಾಡಿದ್ದಾರೆ. ಉದಾ: ಒಂದು ಕಿಲೋಗ್ರಾಂ ಸಿಹಿ ಪದಾರ್ಥಗಳಿಗೆ 5 ಮಿಲಿಗ್ರಾಂ, ಒಂದು ಕಿಲೋಗ್ರಾಂ ಬೇಕರಿ ತಿನಿಸುಗಳಿಗೆ 20 ಮಿಲಿಗ್ರಾಂ ಗಿಂತ ಹೆಚ್ಚು Coumarin ಹಾಕಬಾರದು.

ಸಿನ್ನಮನ್ ಟೋಸ್ಟ್ - ಗರಿ ಗರಿ ಟೋಸ್ಟ್ ಮೇಲೆ ತೆಳುವಾಗಿ ಬೆಣ್ಣೆ ಸವರಿ, ದಾಲ್ಚಿನ್ನಿ ಮತ್ತು ಸಕ್ಕರೆ ಮಿಶ್ರಣವನ್ನು ಸಿಂಪಡಿಸಿ. ಇದು ಬಲು ರುಚಿ. ಮಕ್ಕಳಿಗೆ ಬಿಸ್ಕೀಟಿನ ಬದಲು ತಿನ್ನಲು ಕೊಡಬಹುದು.

ದಾಲ್ಚಿನ್ನಿ ಮತ್ತು ಸಕ್ಕರೆ ಮಿಶ್ರಣ - 1 ಟೇಬಲ್ ಚಮಚ (20 ಮಿಲಿಲೀಟರ್) ಸಕ್ಕರೆಗೆ (ಕ್ಯಾಸ್ಟರ್ ಶುಗರ್) 1/4 ಟೀ ಚಮಚೆ ದಾಲ್ಚಿನ್ನಿ ಪುಡಿ ಅಥವಾ 1/4 ಲೋಟ (60 ಮಿಲಿಲೀಟರ್) ಸಕ್ಕರೆಗೆ (ಕ್ಯಾಸ್ಟರ್ ಶುಗರ್) 2-4 ಟೀ ಚಮಚೆ ದಾಲ್ಚಿನ್ನಿ ಪುಡಿ ಸೇರಿಸಿ. ಈ ಮಿಶ್ರಣವನ್ನು ಗಾಳಿಯಾಡದಂತೆ ಒಂದು ಡಬ್ಬದಲ್ಲಿ ಹಾಕಿಡಿ.

ಕೊನೆಯ ಮಾತು:

- ಆಹಾರ ಪದಾರ್ಥ ಮತ್ತು ಪಾನೀಯಗಳನ್ನು ತಯಾರಿಸುವಾಗ ಸಿಲೋನ್ ಸಿನ್ನಮನ್ ಉಪಯೋಗಿಸಿ.
- ಸಂಸ್ಕರಿತ ಆಹಾರ ಪದಾರ್ಥಗಳನ್ನು ಆದಷ್ಟು ದೂರವಿಡಿ.

Reference: 1. Khan A, Safdar M, Ali Khan MM, Khattak KN, Anderson RA. Cinnamon improves glucose and lipids of people with type 2 diabetes. Diabetes Care. 26.12 (2003): 3215-3218. ▪

ವಿಚಾರ ವಿಹಾರ

ಮಾಲು, ಅಡಿಲೈಡ್

ನಗು

"ನಗ್ತೀರ್ಬೇಕ್ ನನ್ನ ಹೆಣ...!" ಅಂತ ಹೇಳಿದ್ದು ನಮ್ಮ ಕರ್ನಾಟಕ ಪ್ರಹಸನ ಪ್ರಪಿತಾಮಹ! ಪಂಡಿತ ಮಂಡಲಾಗ್ರೆಸರ! ಚಂಡಪ್ರಚಂಡ! ನಮ್ಮ ಟೀ.ಪಿ.ಕೈಲಾಸಂರವರು.

ಜನಗಳಿಗೆ ಆಗ ನಗುವುದಕ್ಕೆ ತುಂಬಾ ಬಿಗುಮಾನವಿದ್ದಿರಬಹುದು, ಟೀ.ಪಿ.ಕೆ ರವರು ನಗುವುದು ಹೇಗೆ ಅನ್ನೋದನ್ನ ಜನರಿಗೆ ಕಲಿಸಿದರು ಅನ್ನಿಸುತ್ತೆ!

"ನಾಗತ್ತೇಗೆ ಮೀಸೆ ಬಂದರೆ ಚಿಕ್ಕಪ್ಪ ಅಂತ ಕೂಗ್ ಬಹುದು!"

"ದೆಗಡಿ ಆಗಿದೆ ಗೊಂಚ ದೆಶ್ಯ ಇದೆಯಾ?!

ಏ..ಲಲಗೆ ಇಲ್ಲ ಲಿಲಗೆಲ್ ಕೊಡ್ಲಿ!"

"ಬಂದ್ಯಲ್ಲೋ..ಮದುವೆ ಮುಗಿದಮೇಲೆ ಮತಾಪಿನೋನ್ ಬಂದಹಾಗೆ..!"

'ಲೇ... '

'ಏನ್ರಿ ಅದು?! ಲೇ.. ನನ್ನಂಥ ಲೇಡಿಗೆ ಲೇ... ಯಷ್ಟ್ರೀ ಧೈರ್ಯ ನಿಮಗೆ

'ಕ್ಷಮಿಸಿ ಮೇಡಂ, ಲೇ..ಅಂತ ಹೇಳಿ ಡಿ ಅನ್ನೋದ್ರೋಳಗೆ ನೀವ್ ದುಮಖ್ಬಿಟ್ರಿ !

ಇವೆಲ್ಲವೂ ನಮ್ಮ ಗುಂಡುರಾಯರ ಅರ್ಥಾತ್ ಕೈಲಾಸಂ ಗುಳಿಗೆಗಳು! ಶಾಶ್ವತವಾಗಿ ನಗೆ ಬರಿಸುವ ಟಾನಿಕ್!

ಶ್ರೀಮಾನ್ ಡಿ.ವಿ.ಜಿ ರವರು ತಮ್ಮ ಮಂಕುತಿಮ್ಮನ ಮೂಲಕ

'ನಗುವುದು ಸಹಜ ಧರ್ಮ
ನಗಿಸುವುದು ಪರಧರ್ಮ
ನಗುವ ಕೇಳುತ ನಗಿಸುವುದು ಅತಿಶಯದ ಧರ್ಮ' ಅಂತ ಹೇಳಿಸಿದ್ದಾರೆ.

ಒಂದು ಅಭಿನಯ ತರಬೇತಿ ಶಾಲೆ, ನಗುವ ಮುಖ ಯಾವ ಯಾವ ರೀತಿ ಮಾಡೋದು ಅನ್ನೋ ತರಬೇತಿ ಮುಗಿದಮೇಲೆ
ಒಬ್ಬ ಸ್ಟೂಡೆಂಟ್
"ಸಾರ್, ಅಳೋ ಮುಖ ಹ್ಯಾಗೆ ಮಾಡೋದು ಅಂತ ಕಲಿಸ್ತೀರ.." ಅಂತ ಕೇಳ್ತಾನೇ ಗುರುಗಳಿಗೆ.
ಆಗ ಗುರುಗಳು "ನಿಮಗೆ ಆ ಟ್ರೈನಿಂಗ್ ಬೇಕಿಲ್ಲ ಯಾವಾಗಲೂ ನಿಮ್ಮ ಮುಖ ಇರುತ್ತಲ್ಲ ಹಾಗೆ ಇರ್ಲಿ, ಅದಕ್ಕೆ ಅಭಿನಯ ಬೇಕಿಲ್ಲ"!
ಅಂದುಬಿಡೋದೆ!
ನಗುವ ಸಹಜದ ಮೋರೆಯ ಧರ್ಮ ಆಗಬೇಕೆ ಹೊರತು ಅಳುವ ಹ್ಯಾಪ್ ಮೋರೆಯದು ಅಲ್ಲ, ಅಲ್ಲವೆ?

'ಮನುಜಗೆಂದು ನಗೆಯ ಕೊಟ್ಟೆ
ನಗೆಯೊಳು ಹಲ ಬಗೆಯನಿಟ್ಟೆ
ನೂರು ನೋವ ಬಿಟ್ಟೆ ಒಂದು ನಗೆಯ ಕಾಡಲು'
ಇದು ನನ್ನ ನೆಚ್ಚಿನ ಕವಿ ಬಿ.ಆರ್.ಲಕ್ಷ್ಮಣ ರಾವ್ ರವರ ಒಂದು ಕವನದ ಸಾಲು.

ದಿನ ನಿತ್ಯದ ಜೀವನದಲ್ಲಿ ಸಾಕಷ್ಟು ನಗೆ ಪ್ರಸಂಗಗಳು ಬಂದು ಹೋಗುತ್ತವೆ, ಆ 'ಹಲ ಬಗೆಗಳ...' ನಗೆಯಲ್ಲಿ, ಯಾರಿಗೂ ನೋಯಿಸದ ನಗೆಯು ಎಲ್ಲರಿಗೂ ಸಂತಸ ತರಲಿ.
ನಾವೆಲ್ಲಾ Laughing ನಲ್ಲಿ ಭಾಗಿಯಾಗಬೇಕು. ಆದರೆ, ನಾವು ಯಾರಿಗೂ Laughing stock ಆಗುವುದು ಬೇಡ! ▪

ಚಿಲುಮೆಯ ಎಲ್ಲಾ ಸಂಚಿಕೆಗಳೂ ಸೇರಿದಂತೆ ಕಥೆ, ಕವನ, ಹಾಸ್ಯ, ಆರೋಗ್ಯ ... ಇನ್ನಿತರ ಸಾಹಿತ್ಯಕ್ಕೆ ಭೇಟಿಕೊಡಿ
HTTP://WWW.SUGAMAKANNADA.COM/

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್‌ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಅಮ್ಮಾ ಸಿಂಹಾಸನಾರೋಹಣ ಕಥನವು

ಈಸಿಛೇರಿನಲ್ಲಿ ಹಿಂದಕ್ಕೊರಗಿ ನವರಾತ್ರಿಯ ಚರ್ಪುಗಳನ್ನು ಮೆಲ್ಲುತ್ತಾ ಕುಳಿತಿದ್ದೆ. ದೇವಿಯ ವಿವಿಧ ಅವತಾರಗಳ ಬಗ್ಗೆ ಯೋಚಿಸುತ್ತಾ ಹಾಗೆಯೇ ಕಣ್ಣುಮುಚ್ಚಿದೆ. ಮನಃಪಟಲದ ಮೇಲೆ ಒಂದು ವಿಶೇಷ ದೃಶ್ಯ ಕಂಡುಬಂದಿತು.

ವಿಕ್ರಮಾದಿತ್ಯನ ಸಿಂಹಾಸನವನ್ನೇ ಹೋಲುವ ಒಂದು ಆಸನ. ಅದನ್ನು ಏರಲು ಹತ್ತು ಮೆಟ್ಟಿಲುಗಳು. ಪ್ರತಿ ಮೆಟ್ಟಿಲಿನಲ್ಲೂ ಒಂದೊಂದು ದೇವತೆ ನಿಂತಿರುವುದು ಕಂಡುಬರುತ್ತಿದೆ. ಕೆಳಮೆಟ್ಟಿಲಿನ ಬಳಿ ಪುರಚ್ಚಿ ತಲೈವಿ ಜಯಲಲಿತಾ ನಿಂತಿದ್ದಾರೆ. ದೇವತೆಗಳ ಪೈಕಿ ಮೊದಲನೆಯದಾಗಿ ವಿದ್ಯಾಮಾತೆ ಸರಸ್ವತಿ ಜಯಲಲಿತೆಯನ್ನು ಕುರಿತು:

"ಎಲೈ ಭೂಮಿತೂಕದ ಹೆಣ್ಣೆ, ಇಡೀ ಜಗತ್ತು ನನ್ನನ್ನು ವಿದ್ಯೆಯ ಅಧಿದೇವತೆ ಎಂದು ತಿಳಿದಿದೆ. ಆದರೆ ನಿನ್ನ ಅಗಾಧವಾದ ವಿದ್ಯೆಯ ಮುಂದೆ ನಾನು ಸೂರ್ಯನ ಮುಂದಿನ ಮೋಂಬತ್ತಿ! ನೀನಾದರೋ ದೂತ, ದ್ಯೂತ, ವ್ಯೂಹ, ಮೋಹ, ಸ್ನೇಹ, ದ್ರೋಹ, ಎಲ್ಲ ವಿದ್ಯೆಗಳನ್ನು ಬಲ್ಲವಳಾಗಿ ಸಕಲವಿದ್ಯಾ ಪರಪ್ಪನಗ್ರಹಾರಗತ, ಕ್ಷಮಿಸು, ಪಾರಂಗತಳಾಗಿದ್ದೀಯೆ. ತನ್ಮೂಲಕ ಈ ಅಮ್ಮಾ ಸಿಂಹಾಸನದ ಮೆಟ್ಟಿಲನ್ನು ಏರಲು ಅರ್ಹಳಾಗಿದ್ದೀಯೆ. ಏರು ಒಂದು ಮೆಟ್ಟಿಲನ್ನು" ಎನ್ನುತ್ತಾ ಮೆಟ್ಟಿಲಿಳಿದು ಕತ್ತಲಲ್ಲಿ ಅಂತರ್ಧಾನಳಾದಳು.

ಎರಡನೆಯ ಮೆಟ್ಟಿಲಿನಲ್ಲಿ ಇದ್ದ ಸೌಭಾಗ್ಯ ಲಕ್ಷ್ಮಿ "ಕನ್ನಡಿಗರು ನಿನ್ನ ಬಗ್ಗೆ ಇಲ್ಲಸಲ್ಲದ ಮಾತುಗಳನ್ನಾಡಿದ್ದರು. ಆದರೆ ನಿಜಕ್ಕೂ ನೀನೇ ಅವರ ನಿಜವಾದ ಸೌಭಾಗ್ಯಲಕ್ಷ್ಮಿ. ನೀನು ನಿನ್ನ ಕೇಸನ್ನು ಚೆನ್ನೈನಲ್ಲೇ ನಡೆಸಿಕೊಳ್ಳುವ ತಾಕತ್ತಿದ್ದವಳು. ಆದರೂ ನೀನು ಹುಟ್ಟಿದ್ದು ಕರ್ನಾಟಕದಲ್ಲಾದ್ದರಿಂದ, ತವರಿನ ಮಮತೆಯಿಂದ, ತವರಿನ ಹಿತಕ್ಕಾಗಿ ಇಲ್ಲಿಗೆ ಬಂದು ನೂರು ಕೋಟಿ ರೂಗಳನ್ನು ದಂಡದ ರೂಪದಲ್ಲಿ ದಾನವಾಗಿ ಕೊಡುವುದರ ಮೂಲಕ ನಾಲ್ಕೂವರೆ ಜಯಲಲಿತಾ ಒಂದು MoMಗೆ ಸಮ (MoMಗೆ ಖರ್ಚಾದದ್ದು 450 ಕೋಟಿಯೆಂದು ತಿಳಿ) ಎಂದು ನೀನು ತೋರಿಸಿಕೊಟ್ಟಿದ್ದೀಯೆ. ನೀನು ವರ್ಷಕ್ಕೊಮ್ಮೆ ಹೀಗೆ ನೂರುಕೋಟಿ ನಿನ್ನ ಹೆಸರಿನಲ್ಲೂ, 30 ಕೋಟಿಗಳನ್ನು ನಿನ್ನ ಸಂಗಡಿಗರ ಹೆಸರಿನಲ್ಲೂ ಕೊಡುತ್ತಾ ಬಂದರೆ ಇಸ್ರೋದವರು ಐದು ವರ್ಷಕ್ಕೊಮ್ಮೆ ಮಂಗಳಗ್ರಹಕ್ಕೆ ಹೋಗಲು ಅನುಕೂಲವಾಗುತ್ತದೆ. ನಿನಗೆ ಮಂಗಳವಾಗಲಿ. ನಿನ್ನ ಮೂಲಕ ಮಂಗಳಯಾನಕ್ಕೂ ಮಂಗಳವಾಗಲಿ. ಹತ್ತು ಎರಡನೆಯ ಮೆಟ್ಟಿಲನ್ನು" ಎಂದು ಹೇಳುತ್ತಾ ನಿರ್ಗಮಿಸಿದಳು.

ಮೂರನೆಯ ಮೆಟ್ಟಿಲಿನಲ್ಲಿದ್ದ ಧಾನ್ಯಲಕ್ಷ್ಮಿ "ಎಲೈ ಬುಲೆಟ್ ಪ್ರೂಫ್ ವಸನಧಾರಿಣಿ, ನಿನ್ನ ಅಮ್ಮಾ ಕ್ಯಾಂಟೀನ್ ಮೂಲಕ ಜನರ ಹೊಟ್ಟೆ ತುಂಬಿಸಿದೆ. ನಿನ್ನ ಅಮ್ಮಾ ಪೇಸ್ಟ್ರೀ, ಅಮ್ಮಾ ಸಿಮೆಂಟ್, ಅಮ್ಮಾ ಅದು, ಅಮ್ಮಾ ಇದುಗಳ ಮೂಲಕ ನಿನ್ನ ತಿಜೋರಿಯ ಹೊಟ್ಟೆಯನ್ನೂ ತುಂಬಿಸಿಕೊಂಡೆ. ಎರಡು ಸಾವಿರ ಎಕರೆಗಳಲ್ಲಿ ಚೆನ್ನಾಗಿಯೇ ಬೆಳೆ ಆಗಿರಬೇಕೆಂದು ನಿನ್ನ ಸುತ್ತಳತೆಯೇ ಒತ್ತಿ ಹೇಳುತ್ತಿದೆ. (ಸ್ವ)ಜನಹಿತಕ್ಕಾಗಿ ಹೋರಾಡುವ ನಿನ್ನ ಸಾಹಸವನ್ನು ಮೆಚ್ಚಿ, ಇದೋ ನಿನಗೆ ಈ ಮೂರನೆಯ ಮೆಟ್ಟಿಲನ್ನು ಬಿಟ್ಟುಕೊಡುತ್ತಿದ್ದೇನೆ" ಎನ್ನುತ್ತಾ ಅಂತರ್ಧಾನಳಾದಳು.

ನಾಲ್ಕನೆಯ ಮೆಟ್ಟಿಲಿನಲ್ಲಿ ಲಕ್ಷ್ಮಿಯರ ಸಾಲಿಗೆ ಹೊಸದಾಗಿ ಸೇರಿದ ವಸ್ತ್ರಲಕ್ಷ್ಮಿ ನಿಂತಿದ್ದಳು. "ಪೆಣ್ಗಳೊಳ್ ಪೆಣ್ಣೇ, ಎನ್ನ ಮುದ್ದಿನ ಕಣ್ಣೆ, ಸೂರೆಗೊಂಬ ಸೀರೆಗಳನು ಸಾಸಿರದಲಿ ಹೊಂದಿ ಎನ್ನ ಮನವ ಸೆಳೆದ ಕನ್ನೆ. ಅನಿತು ವಸ್ತ್ರ, ಅನಿತು ಪಾದರಕ್ಷೆಗಳನು ತೊಟ್ಟು ಮೆರೆವ ನೀನು ನಿಜಕು ಧನ್ಯೆ. ಅಚ್ಚರಿಯ ಪೆಣ್ಣೇ, ಆರೇನೇ ಪೇಳಲಿ, ನಾನರಿತಿಹೆನೇ ಅದರ ರಹಸ್ಯಮಂ. ಒಂದು ಸೀರೆ ಸಾಕೆ ನಿನ್ನ ಗಾತ್ರ ತಬ್ಬಲಿಕ್ಕೆ? ದ್ರುಪದಪುತ್ರಿಗಿತ್ತ ದೊಡ್ಡ ಕೃಷ್ಣ ಸೀರೆಯಂತೆ, ನಿನಗು ಬೇಕು ಕಂತೆ ಕಂತೆ ಗಜದ ಸೀರೆ ವನಿತೆ. ಮಿಕ್ಕ ಸ್ತ್ರೀಯರೆಲ್ಲ ಇಷ್ಟೆ ತೊಡುವ ಕಾಲದಲ್ಲು, ಸೀರೆ ಸೊಬಗೆ ಸೊಬಗು ಎಂಬ ನಿನ್ನ ನಿಲುವೆ ಹೊನಲು. ವಸ್ತ್ರಸಿರಿಯೊಳಿಳೆಯೊಳ್ ನಿನಗೆ ಸಾಟಿಯಿಲ್ಲವಾರು. ಏರ್ಚತುರ್ಥ ಮೆಟ್ಟಿಲನ್ನು, ಸಾಗಿ ಮೇಲೆ ಕೂರು" ಎನ್ನುತ್ತಾ ಕೆಳಸರಿದಳು.

"ನನ್ನನ್ನು ಸುಳ್ಳೇ ಸುವರ್ಣಲಕ್ಷ್ಮಿ ಎಂದು ಕರೆಯುತ್ತಾರೆ. ನೋಡಲು ಒಳ್ಳೆಯ ಬಣ್ಣ ಇರುವ ನೀನಲ್ಲವೆ ಸು-ವರ್ಣ ಲಕ್ಷ್ಮಿ! ಇನ್ನು ಚಿನ್ನದ ಲೆಕ್ಕದಲ್ಲಂತೂ ನಿನಗೆ ನೀನೇ ಸಾಟಿ. ತೂಕದ ವ್ಯಕ್ತಿ ಎಂದು ಕರೆಸಿಕೊಳ್ಳಬೇಕಾದರೆ ಚಿನ್ನವನ್ನು ಗ್ರಾಂನಲ್ಲಲ್ಲ, ಗ್ರಾಮದ ಲೆಕ್ಕದಲ್ಲಿ ಅಳೆಯಬೇಕು. ನಿನ್ನಲ್ಲಿರುವ ಚಿನ್ನ ಕನಿಷ್ಠ ಹತ್ತು ಗ್ರಾಮಗಳಿಗೆ ಸಾಕಾದೀತು, ಆದ್ದರಿಂದ ನೀನೇ ಸುವರ್ಣ ಲಕ್ಷ್ಮಿ. ಚಿನ್ನ ಗಣಿಯ ಆಳದಿಂದ ಮೇಲೆ ಬಂದಂತೆ ನೀನೂ ಸೋಲಿನ ಹಳ್ಳದಿಂದ ಎದ್ದುಬಂದೆ. ಚಿನ್ನ ಬೆಂಕಿಯಲ್ಲಿ ಪುಟವಿಟ್ಟಂತೆ ನೀನೂ ಹಗರಣಗಳಲ್ಲಿ ಬೆಂದೂ, ಬೆಂದೂ, ಇಲ್ಲಿಯವರೆಗೆ ಬಂದೆ.

(ಮುಂದಿನ ಪುಟ ನೋಡಿ...)

ಚಿನ್ನ ಪದಕವಾಗಿ ಮಿಂಚುವಂತೆ ನೀನೂ ಪದವಿಗೇರಿ ಮಿಂಚಿದೆ. ಕಷ್ಟಕಾಲದಲ್ಲಿ ಚಿನ್ನ ಕತ್ತಲೆಯ ಕೋಣೆಗೆ ಹೋಗಿ ಸೇರುವಂತೆ ನೀನೂ ಸೇರಿಬಂದೆ. ಇವೆಲ್ಲ ಗುಣಗಳಿಂದ ಚಿನ್ನವೇ ಆದ ನೀನೇ ಸುವರ್ಣಲಕ್ಷ್ಮಿ. ಬಾ, ಐದನೆ ಮೆಟ್ಟಿಲು ಇನ್ನು ನಿನ್ನದೇ" ಎನ್ನುತ್ತಾ ಸ್ಥಳ ಬಿಟ್ಟುಕೊಟ್ಟಳು.

ಆರನೆಯ ಮೆಟ್ಟಿಲಿನಲ್ಲಿದ್ದ ಧೈರ್ಯಲಕ್ಷ್ಮಿ "ಜೈಲ್ ಲಲಿತೇ... ಕ್ಷಮಿಸು... ಜಯಲಲಿತೇ, ಪುರಾಣಕಾಲದಿಂದಲೂ ಮಣ್ಣು ತಿನ್ನುವ ಮಣ್ಣಿನ ಮಕ್ಕಳು, ಕಲ್ಲು ತಿನ್ನುವ ಗಣಿ ಮಕ್ಕಳು ಇದ್ದೇ ಇದ್ದಾರೆ. ಆದರೆ ಅವರಾರೂ ನಿನ್ನಷ್ಟು ಸಾಹಸಿಗಳಲ್ಲ. ಏನೇ ತಿಂದರೂ ಕೋತಿ ತಾ ತಿಂದು ಮೇಕೆಯ ಬಾಯಿಗೆ ಒರಸಿದಂತೆ ಬೇನಾಮಿಯಾಗೇ ಆಸ್ತಿ ಮಾಡಿದರು. ಆದರೆ ನೀನೋ... ರಾಜಾರೋಷ... ಅಲ್ಲ ಅಲ್ಲ, ರಾಣೇರೋಷವಾಗಿ, ನಿನ್ನ ಹೆಸರಿನಲ್ಲೇ ಆಸ್ತಿ ಮಾಡಿಕೊಂಡೆ. ಅಲ್ಲದೆ ಋಷಿಗಳೆಂದರೆ, ಮುನಿಗಳೆಂದರೆ, ಆಶ್ರಮದವರೆಂದರೆ ಹೆದರಬೇಕೆಂದು ಸಹ ತಿಳಿಯದೆ ನೀನು ಮಠಾಧೀಶರನ್ನೇ ವಾನಪ್ರಸ್ಥ ಉರುಫ್ ಜೈಲಿಗೆ ಕಳುಹಿಸಿದ ದಿಟ್ಟೆ. ಸದನದಲ್ಲಿ ಪುರುಷವಸ್ತ್ರಾಪಹರಣ ಉಂಟಾಗುವ ಸಂದರ್ಭ ಸೃಷ್ಟಿಸಿದ ಶೂರಳೇ, ನೀನಲ್ಲವೆ ದಿಟದ ಧೈರ್ಯಲಕ್ಷ್ಮಿ. ನೀನು ಇದಿರಿರಲು ನನಗೆ ಇಲ್ಲಿ ನಿಲ್ಲುವ ಲೈಸೆನ್ಸೇ ಇಲ್ಲ. ಕ್ಲೈಂಬ್ ಒನ್ ಮೋರ್ ಸ್ಟೆಪ್ಪು" ಎಂದು ಹೇಳುತ್ತಾ ಸೈಡ್ ಸ್ಟೆಪ್ ಮಾಡಿ ಇಳಿದುಹೋದಳು.

ಏಳನೆಯ ಪಾವಟಿಗೆಯಲ್ಲಿ ಸಾಕ್ಷಾತ್ ಪಾರ್ವತಿಯೇ ನಿಂತಿದ್ದಳು. "ನಾವು ನಮ್ಮ ಮಕ್ಕಳಿಗೇ ಮದುವೆ ಮಾಡುವುದು ಕಷ್ಟ. ಹಾಗಿರುವಾಗ ನೀನು ಇನ್ಯಾರದೋ ಮದುವೆಯನ್ನು ಅಷ್ಟೊಂದು ಅದ್ದೂರಿಯಿಂದ ಮಾಡಿ ಧನ್ಯಳಾದೆ. ನಾನು ಕೇವಲ ಪಳಗಿದ ಹುಲಿಯ ಮೇಲೆ ಸವಾರಿ ಮಾಡುತ್ತೇನೆ. ನೀನೋ. ರಾಜಕಾರಣದ ಹುಚ್ಚುಕುದುರೆಗಳ ಮೇಲೆ ಲೀಲಾಜಾಲವಾಗಿ ಸವಾರಿ ಮಾಡುತ್ತಾ ಸಾಗುತ್ತೀಯೆ. ನನಗಿರುವ ಸುಬ್ರಹ್ಮಣ್ಯ ನನಗೆ ಎದುರುಮಾತನಾಡುವುದಿಲ್ಲ. ನಿನ್ನ ಸುಬ್ರಹ್ಮಣ್ಯ ಎದುರು ಮಾತನಾಡದ ದಿನವೇ ಇಲ್ಲ. ಅಲ್ಲದೆ ನಿನ್ನೊಡನೆ ಸೆಣಸುವವರು ಕರುಣೆಯೇ ಇಲ್ಲದೆ, ನಿಧಿ ಮಾತ್ರ ಹೊಂದಿರುವವರು. ನಿಜಕ್ಕೂ ನೀನು ಅಪ್ರತಿಮಳು. ನಿನ್ನ ಮಟ್ಟಕ್ಕೆ ನಾವಿಲ್ಲ. ನಡೆ ವ್ಯಾಘ್ರರಾಜ, ಇಳಿ ಕೆಳಗೆ" ಎನ್ನುತ್ತಾ ಕೆಳಸರಿದುಹೋದಳು.

"ದುರ್ಗಿ ಎಂದು ನನ್ನನ್ನು ಕರೆಯುತ್ತಾರೆ. ಆದರೆ ದುರ್ಗವಿದ್ದರಲ್ಲವೆ ದುರ್ಗಿ? ರಾಜರ ಕಾಲಕ್ಕೇ ದುರ್ಗಗಳೆಲ್ಲಾ ಹೋದವು. ಅಲ್ಲೊಮ್ಮೆ, ಇಲ್ಲೊಮ್ಮೆ ಜನಕ್ಕೆ ಕೋಳಿ, ಕುರಿ ತಿನ್ನುವ ಆಸೆಯಾದಾಗ ಮಾತ್ರ ನನ್ನನ್ನು ಜ್ಞಾಪಿಸಿಕೊಳ್ಳುತ್ತಾರೆ. ನವರಾತ್ರಿಯಲ್ಲಿ ನನ್ನ ಹ್ಯಾಪಿ ಬರ್ತ್ ಡೇ ದಿವಸ ಮಾತ್ರ ಈ ದುರ್ಗಿಗೊಂದು ಮುರ್ಗಿ! ಅದೆಂದೋ ಕೆಲವು ರಾಕ್ಷಸರನ್ನು ಕೊಂದಿದ್ದು ಈಗ ಮಸುಕುಮಸುಕಾದ ನೆನಪು. ನೀನೋ ದಿನಕ್ಕೊಂದು ರಕ್ಕಸನನ್ನು ಎದುರಿಸುವ ದಿಟ್ಟೆ. ಬಾ ಮಗಳೆ, ಈ ಮೆಟ್ಟಿಲು ನಿನ್ನದೇ" ಎನ್ನುತ್ತಾ ದುರ್ಗಿ ಎಂಟನೆಯ ಮೆಟ್ಟಿಲಿಂದ ಇಳಿದುಹೋದಳು.

"ಹತ್ತು ಕೈಗಳು, ಒಂದೊಂದು ಕೈಯಲ್ಲಿ ಒಂದೊಂದು ಅಸ್ತ್ರ. ಆದರೂ ನಿನಗೆ ಸಾಟಿಯಿಲ್ಲ ನಾನು" ಎಂದಳು ಒಂಬತ್ತನೆಯ ಮೆಟ್ಟಿಲಿನಲ್ಲಿದ್ದ ಕಾಳಿ. "ತೆನಾಲಿರಾಮನಿಗೆ ನಗೆ ಕೊಟ್ಟೆ, ಕಾಳಿದಾಸನಿಗೆ ಕವನ ಕೊಟ್ಟೆ. ಆದರೆ ಅವೆಲ್ಲ ನಿನ್ನ ಕೊಡುಗೆಗಳ ಮುಂದೆ ನಗಣ್ಯ. ಎಂಜಿಆರ್ ಗೆ ನೀನೇ ಕವನವಾದೆ, ಸದನದಲ್ಲಿ ನೀನೇ ಅಟ್ಟಹಾಸದಿಂದ ನಕ್ಕೆ. ನಿನ್ನ ಮಾತಿನ ಬಾಣ, ನಡತೆಯ ತ್ರಿಶೂಲ, ಮಟ್ಟಹಾಕುವ ಭರ್ಜಿಗಳ ಮುಂದೆ ನನ್ನ ಆಯುಧಗಳು ಮೊಂಡು. ಕ್ರೋಧದಲ್ಲಿ, ರೋಷದಲ್ಲಿ ನನ್ನ ಸರಿಸಾಟಿ ನೀನು. ಏರು ಒಂಬತ್ತನೆಯ ಮೆಟ್ಟಿಲನ್ನು"

ಜಯಲಲಿತೆಗೆ ಸಿಂಹಾಸನ ಈಗ ಒಂದೇ ಮೆಟ್ಟಿಲಿನಷ್ಟು ದೂರ!

"ಬಾ ವತ್ಸೆ; ಎಷ್ಟೇ ಕೇಳಿದರೂ ನಿನಗೆ ಕಾವೇರಿಯನ್ನು ನೀಡಲಿಲ್ಲವೆಂಬ ಅಸಮಾಧಾನವನ್ನು, ಮತ್ತು ಕಾವೇರಿ ನೀರಿನ ತೃಷೆಯನ್ನು ನೀಗಿಸಿಕೊಳ್ಳಲು ಕರ್ನಾಟಕಕ್ಕೇ ಬಂದುಬಿಟ್ಟೆಯಾ? ಮೇಲುಕೋಟೆಯವಳಾದ ನಿನ್ನನ್ನು ಮೇಲ್ಪಟ್ಟದ ಕೋಟೆಯಲ್ಲೇ ಇಡುವ ವ್ಯವಸ್ಥೆಯನ್ನು ಮಾಡುತ್ತೇನೆ. ಪಟ್ಟ ಮಹಿಷಿಯಾದ ನೀನು ಮಹಿಷಾಸುರಮರ್ದಿನಿಯಾದ ನನ್ನ ಬಳಿಗೆ ಬಂದುದು ನನಗೆ ಅತೀವ ಸಂತಸ ತಂದಿದೆ. ಬಾ, ನನ್ನ ಸ್ಥಳದಲ್ಲಿ ನಿಲ್ಲು" ಎನ್ನುತ್ತಾ ಚಾಮುಂಡಿ ನಿರ್ಗಮಿಸಿದಳು.

ಹತ್ತೂ ದೇವತೆಗಳು ಕೆಳಗೆ ನಿಂತರು. ಮೇಲೆ ಜಯಲಲಿತೆ. ಹಿನ್ನೆಲೆಯಲ್ಲಿ ಐಗಿರಿ ನಂದಿನಿ ಶ್ಲೋಕ!

ಹೌದೇ? ಅಲ್ಲ ಅಲ್ಲ! ಒಂದೇ ಕ್ಷಣದಲ್ಲಿ scene change! ಮೆಟ್ಟಿಲುಗಳಿದ್ದ ಜಾಗದಲ್ಲಿ ಸೆರೆಮನೆ, ಸಿಂಹಾಸನವಿದ್ದ ಜಾಗದಲ್ಲಿ ಸೆಲ್ ನಂಬರ್ 23! ಹಿನ್ನೆಲೆಯಲ್ಲಿ ಶ್ಲೋಕವಲ್ಲ, ಜಯಲಲಿತೆಯ ಅಭಿಮಾನಿಗಳಿಗೆ ಶೋಕಗೀತೆ ಹೀಗೆ ಹೊಮ್ಮಿತ್ತು!

(ಮುಂದಿನ ಪುಟ ನೋಡಿ...)

“ಜೈಲಲಿತಾ ತಮಿಳ್ನಾಡ ತಲೈವಿ ನೀ
ತಲೆಯಿಲ್ಲದ್ ಕೆಲಸವನೇಕ್ಮಾಡಿದೆ
ಕಾಂಗ್ರೆಸ್ಸಿನವರಂತೆ ತಿನ್ನೋದ ಕಲಿಯದೆ
ಸಿಕ್ಹಾಕಿಕೊಂಡೀಗ ಜೈಲ್ ಸೇರಿದೆ ॥

ಎಂಜಿಆರರಗಿಣಿ ಎಐಎಡಿಎಂಕೆ ಮಣಿ
incomeಗಿಂತ ಆಸ್ತಿ ಹೆಚ್ಚಿದ್ರೇನಾಗತ್ತೇ
ಒಂದಲ್ಲ ಒಂದು ದಿವ್ಸ ಕೇಸು ಫೈಸಲು ಆಗಿ
ನಾಲ್ಕೊರ್ಷದವಧಿಗೆ ಜೈಲಾಗತ್ತೆ ॥

ಸಿಎಂಗಿರಿ ಎಗಹೋಗಿ ದಾದಾಗಿರಿ ಖತಂ ಆಗಿ
ರಾಗಿಮುದ್ದೆ ತಿನ್ನೋದೊಂದೆ ಲೈಫ್ ಆಗತ್ತೆ
ನೂಕೋಟಿ ದಂಡ ತೆತ್ತು ಹೊರಗ್ಬರೋಹೊತ್ಗೆ ನಿಂಗೆ
ಐಷಾರಾಮದ್ ವಯ್ಸಂತೂ ಮುಗ್ದಿರತ್ತೆ ॥

“ಛೆ! ಹೀಗಾಗಬಾರದಿತ್ತು” ಎನ್ನುತ್ತಾ ಕೈ ಕೊಡವಿದೆ. ಈಸಿಛೇರಿನ ಕಟ್ಟಿಗೆ ಮಣಿಕಟ್ಟು ಬಡಿಯಿತು. “ಹಾ!” ಎಂದು ಕಿರುಚುತ್ತಾ ಕಣ್ಬಿಟ್ಟೆ.

ಕನಸು ಹರಿದಿತ್ತು. ▪

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದ ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಪಾಲು

ಕನಕಾಪುರ ನಾರಾಯಣ



ತಿಮ್ಮ ಗುಂಡ ಇಬ್ಬರೂ ಆಪ್ತ ಸ್ನೇಹಿತರು.ಎನಾದರ ವ್ಯಾಪಾರ ಮಾಡುವ ಯೋಜನೆ ಮಾಡಿ ಇಬ್ಬರೂ ಸೇರಿ ಒಂದು ಎಮ್ಮೆ ಕೊಂಡರು. ಚತುರ ತಿಮ್ಮ ಗುಂಡನ ದಡ್ಡತನವನ್ನು ದುರುಪಯೋಗ ಪಡಿಸಿಕೊಂಡು"ಗುಂಡಾ, ಇಬ್ಬರೂ ಈ ಎಮ್ಮೆಯನ್ನು ಚೆನ್ನಾಗಿ ನೋಡಿಕೊಳ್ಳೋಣ.ಎಲ್ಲರಿಗೂ ತಲೆ ಮುಖ್ಯ ಅಲ್ಲವೇ ಅದಕ್ಕೆ ಎಮ್ಮೆಯ ಮುಂದಿನ ಭಾಗ ನಿನ್ನದು ಹಿಂದಿನ ಭಾಗ ನನ್ನ ಜವಾಬ್ದಾರಿ" ಎಂದು ಹೇಳಿದ.

ಸರಿ ಸ್ವಲ್ಪ ಹೊತ್ತಿನ ಬಳಿಕ ಎಮ್ಮೆ ಅರಚಿಕೊಳ್ಳಲು ಶುರುಮಾಡಿತು.ತಿಮ್ಮ ಗುಂಡನಿಗೆ "ಗುಂಡಾ ನಿನ್ನ ಭಾಗ ಕೂಗ್ತಾ ಇದೆ ಹಸಿವೆ ಆಗಿದೆ ಅನ್ನಿಸುತ್ತೆ,ಹುಲ್ಲು ತಂದು ಹಾಕು'ಎಂದ. ಗುಂಡ ಹುಲ್ಲಿನ ಹೊರೆ ಕೊಂಡು ತಂದು ಮೇಯಲು ಹಾಕಿದ.ಸಂಜೆಗೆ ಹಾಲು ಕರೆಯುವ ಸಮಯ ಬಂದಾಗ ಗುಂಡ ಒಂದು ಪಾತ್ರೆ ಹಿಡಿದು"ತಿಮ್ಮಾ ನನ್ನ ಪಾಲಿನ ಹಾಲು?"ಎಂದಾಗ ತಿಮ್ಮ "ಎಮ್ಮೆಯ ಹಿಂದಿನ ಭಾಗ ನನ್ನ ಪಾಲು ನನ್ನದು,ನಿನ್ನದು ತಲೆಯ ಭಾಗ ನಿನಗೆ ಹಾಲು ಇಲ್ಲ" ಎಂದು ಜಂಭದಿಂದ ನುಡಿದ.ದಾರಿ ಕಾಣದೆ ಗುಂಡ ತೆಪ್ಪಗೆ ಹೊರಟ.ಮರುದಿನ ಹಾಲು ಕರೆಯುವ ಸಮಯಕ್ಕೆ ಸರಿಯಾಗಿ ಗುಂಡ ಒಂದು ಕಟ್ಟಿಗೆ ತೆಗೆದುಕೊಂಡು ಎಮ್ಮೆಯ ತಲೆಗೆ ಬಲವಾಗಿ ಹೊಡೆದ.ಎಮ್ಮೆ ತನ್ನ ಹಿಂದೆ ಹಾಲು ಕರೆಯುತ್ತಿದ್ದ ತಿಮ್ಮನನ್ನು ಬಲವಾಗಿ ಜಾಡಿಸಿತು.ಆತನಿಗೆ ಪೆಟ್ಟು ಬಿತ್ತು.ಕೋಪದಿಂದ ಗುಂಡನನ್ನು ಏಕೆ ಹಾಗೆ ಮಾಡಿದೆ ಎಂದು ಕೇಳಲು"ಅದು ನನ್ನ ಭಾಗ ನಿನಗೆ ಕೇಳುವ ಅಧಿಕಾರವಿಲ್ಲ"ಎಂದ.ತಿಮ್ಮನಿಗೆ ತನ್ನ ತಪ್ಪಿನ ಅರಿವಾಯಿತು.ಒಪ್ಪಿಕೊಂಡು ಮುಂದೆ ಹಾಲನ್ನೂ ಭಾಗ ಮಾಡಿಕೊಂಡರು.

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ “ಚಕ್ಕೆ ಮೊಗ್ಗು”

ಸುದರ್ಶನ್. ಏನ್
ಇವರ “ಅನಿವಾಸಿ”



ಬದರಿ ತ್ಯಾಮಗೊಂಡ್ಲು
ಇವರ “ಕಾವ್ಯ ಕಸ್ತೂರಿ”

ಸ್ಮಿತಾ ಮೇಲ್ಕೋಟೆ
ಇವರ “ಮಂದಹಾಸ”

ಬೇಳೆ ಬೋಂಡಾ

ಬೇಕಾಗುವ ಸಾಮಗ್ರಿಗಳು

- ಅರ್ಧ ಕಿಲೋ ತೊಗರೀ ಬೇಳೆ
- ಒಂದು ಲೋಟ - ಕಡಲೇ ಬೇಳೆ + ಒಂದು ಲೋಟ ಉದ್ದಿನ ಬೇಳೆ
- ಹನ್ನೆರಡು ಹ.ಮೆ.ಕಾಯಿ + ಒಂದು ಚೂರು ಶುಂಠಿ
- ಎರಡು ಕಂತೆ ಕೊತ್ತಂಬರಿ + ಒಂದು ಕಂತೆ ಪುದೀನಾ ಸೊಪ್ಪು
- ಒಂದು ಚಮಚ ಉಪ್ಪು, ಚಿಟಿಕೆ ಇಂಗು
- ಕರಿಯಲು ಅರ್ಧ ಕಿಲೋ ಎಣ್ಣೆ
-

ಮಾಡುವ ವಿಧಾನ

- ಎಲ್ಲಾ ಬೇಳೆಗಳನ್ನು ನಾಲ್ಕು ಘಂಟೆ ನೀರಿನಲ್ಲಿ ನೆನೆಸಿ
- ನೆಂದ ಬೇಳೆಗೆ ಇಂಗು,ಹ.ಮೆ.ಕಾಯಿ,ಶುಂಠಿ,,ಉಪ್ಪು ಹಾಕಿ ತರಿತರಿಯಾಗಿ ರುಬ್ಬಿಕೊಳ್ಳಿ
- ರುಬ್ಬಿದ ಹಿಟ್ಟಿಗೆ ಕೊತ್ತಂಬರಿ,ಪುದೀನಾ ಸಣ್ಣಗೆ ಹೆಚ್ಚಿ ಕಲಸಿ
- ಒಲೆಯಮೇಲೆ ಬಾಣಲೆಯಲ್ಲಿ ಸಾಕಷ್ಟು ಎಣ್ಣೆ ಹಾಕಿ,ಕಾದ ಎಣ್ಣೆಯಲ್ಲಿ ವಡೆ ಅಥವಾ ಬೋಂಡದ ಆಕಾರದಲ್ಲಿ ತಟ್ಟಿ ಕರಿಯುವುದು

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಇದೇನ್ಲಾ ಇದು

೧. ಚಳಿಯಲ್ಲಿ ಕಲ್ಲು ಬಿಸಿಲಲ್ಲಿ ನೀರು
೨. ಹಲಸಲಾರದ ಹಣ್ಣು ಕಾಯಿಸಲಾರದ ತುಪ್ಪ

ಉತ್ತರಕ್ಕೆ ಪುಟ ೧೪ ನೋಡಿ

ಜಂಬೂ ಸವಾರಿ

(ಮಕ್ಕಳ ಮಲಗಿಸಲೊಂದು ಹಾಡು)

ಪುಟ್ಟುಗೆ ಆನೆ ಮೇಲೆ ಸವಾರಿ ಪುಟ್ಟುಗೆ ಕುದುರೆ ಮೇಲೆ ಸವಾರಿ,
ನಾಳೆ ಮೈಸೂರಲ್ಲಿ ಜಂಬೂ ಸವಾರಿ,
ಕರೆದುಕೊಂಡು ಹೋಗುವೆ ಬೇಗ ಮಲಗು ಜಾಣಮರಿ (ಪುಟ್ಟುಗೆ)

ಚುಕುಬುಕೂ ರೈಲು ಹತ್ತಿ ಮೈಸೂರಿಗೆ ಹೋಗೋಣ,
ಬೊಂಬೆಗಳ ಕೊಡಿಸುವೆ ಬಂದಾಗ ಚನ್ನಪಟ್ಣ,
ಮಂಡ್ಯವೂ ಬಂದಾಗ ಬೆಲ್ಲದಾ ಘಮ ಘಮಾ. (ಪುಟ್ಟುಗೆ)

ಅಲ್ಲಿ ನೋಡು ಕಾಣುತಿದೆ ಶ್ರೀರಂಗಪಟ್ಟಣ,
ಶ್ರೀರಂಗನಾಥನಿಗೆ ಕೈಗಳನು ಮುಗಿಯೋಣ,
ಕಾವೇರಿ ಕಂಡಾಗ ಮೈಯ್ಯೆಲ್ಲಾ ಜುಮ ಜುಮಾ. (ಪುಟ್ಟುಗೆ)

ಇದೋ ನೋಡು ಬಂದಿತು ಮೈಸೂರು ನಗರವೂ,
ಅರಮನೇ ಉದ್ಯಾನವನಗಳಾ ಸಾಲು ಸಾಲು,
ಓಡೋಡಿ ಹತ್ತೋಣ ಚಾಮುಂಡಿ ಮೆಟ್ಟಿಲು. (ಪುಟ್ಟುಗೆ)

ಆನೆ ಹುಲಿ ಕರಡಿ ನರೀ ಜಿಂಕೆ ಮತ್ತು ಸಿಂಹ,
ಹಾವು ಮೊಸಳೆ ನವಿಲು ಕೋತಿ ಜಿರಾಫೆ ನೋಡಮ್ಮ,
ಬೋನಿನಲ್ಲೇ ಇರುವುದೆಲ್ಲ ನೀನು ಹೆದರಬೇಡಮ್ಮ. (ಪುಟ್ಟುಗೆ)

ವಿಜಯದಶಮಿಯಾದಿನದೆ ಜಂಬೂಸವಾರಿ,
ಪಟ್ಟದಾನೆ ಮೇಲೆ ಚಿನ್ನದ ಅಂಬಾರಿ,
ಮೈಸೂರು ನಗರವೆಲ್ಲ ಹಿಗ್ಗಿದೆ ಹಿರಿ ಹಿರಿ. (ಪುಟ್ಟುಗೆ)

ಹೇಗಿತ್ತು ಪುಟ್ಟು ಜಂಬು ಸವಾರಿ,
ಹೇಗಿತ್ತು ಪುಟ್ಟ ಮೈಸೂರು ದಾರಿ,
ನಿದ್ದೆ ಬಂದು ಬಿಟ್ಟಿತೆ ನನ್ನ ಜಾಣ್ ಮರಿ,
ಕನಸ ಕಾಣುತಿರುವೆಯಾ ನನ್ನ ಪುಟ್ಟಮರಿ.

ರಚನೆ: ನಾಗಶ್ರೈಲ ಕುಮಾರ್

ಹಾಸ್ಯ ಚಿಲುಮೆ

ಗುಂಡ: ನಿನ್ನ ಹೆಂಡತಿ ಯಾವಾಗ್ಲೂ ಯಾಕೆ ಕೋಪ ಮಾಡ್ಕೊಂಡ್ ಇರ್ತಾಳೆ?

ತಿಮ್ಮ :ಒಂದು ದಿನ ನಾನು ಅವ್ಳಿಗೆ "ನೀನು ಕೋಪ ಮಾಡ್ಕೊಂಡಾಗ ಸುಂದರವಾಗಿ ಕಾಣ್ತೀಯಾ" ಅಂದೆ ಅದಕ್ಕೆ ಯಾವಾಗ್ಲೂ ಊ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಜಾಣ ಕರ್ನಾಟಕ

೧. ಕುದುರೆಮುಖ ಪರ್ವತಶ್ರೇಣಿಯಲ್ಲಿರುವ ಗಂಗಾಮೂಲದಲ್ಲಿ ಉಗಮವಾಗುವ ಕರ್ನಾಟಕದ ಮೂರು ಪ್ರಸಿದ್ಧ ನದಿಗಳಾವುವು?

೨. ಪಂಚನದಿಗಳು ಹರಿದು ಕರ್ನಾಟಕದ ಪಂಜಾಬ್ ಎಂದು ಕರೆಸಿಕೊಂಡಿರುವ ಜಿಲ್ಲೆ ಯಾವುದು.

ಸರಿ ಉತ್ತರಕ್ಕೆ ಪುಟ ೧೭ ನೋಡಿ

ಇದೇನ್ಲಾ ಇದು – ಉತ್ತರ

೧. ಮಂಜುಗಡ್ಡೆ

೨. ಹುಣಿಸೇಹಣ್ಣು, ಜೇನುತುಪ್ಪ

ಪುಟ್ಟ ನೀಲಿ ನಕ್ಷತ್ರ

ನನ್ನಂಗಳದಲ್ಲಿ ಝಗಮಗಿಸುವ
ಪುಟ್ಟ ನೀಲಿ ನಕ್ಷತ್ರ .
ಕಣ್ತಪ್ಪಿಸಿ ನೀಲಿ ನೀರಸ ಲೋಕ
ಕೈ ಜಗ್ಗಿ ಕೇಳಿತೆನಗೆ
ತೋರಿಸುವೆಯ ನೀನಿರುವ ಮಾಯಾಲೋಕ ?

ಸೂರ್ಯನ ಕೋಲ್ಮಿಂಚಿನ ಮೆರುಗಿನಲ್ಲಿ
ಕಂಡರಿಯದ ಬೆರಗಿನಲ್ಲಿ
ಕಣ್ಣಗಲಿಸಿ ಕೇಕೆ ಹಾಕಿ ನಕ್ಕಿತೊಮ್ಮೆ
ಪುಟ್ಟ ಆಗುಂತಕನ ಹೊಂಬೆಳಕಿಗೆ
ಮೊಗ್ಗೊಂದು ನಾಚಿ ಕೆಂಪಾಯಿತು
ಘಳಿಗೊಮ್ಮೆ !

ಚೆಲುವಿನ ಸೀರೆಯುಟ್ಟ ಪ್ರಕೃತಿಯ ಅನುಭೂತಿ
ಕತ್ತಲಿನ ರೇಖಾ ಚಿತ್ರವೊಂದಕ್ಕೆ
ಹಾಲ್ಬೆಳಕಿನ ಬಣ್ಣ ಬಳಿದಂತೆ
ಇಂದೇನೋ ಎಲ್ಲವೂ ತೊರುತಿದೆ ಹೊಸ ರೀತಿ ,
ಕಾಡು, ಗುಡ್ಡ , ನದಿ ಸಾಗರ , ದಣಿಯಿತು, ಸುತ್ತಿ ಸುತ್ತಿ
ಮಂಜಿನ ಪರ್ವತಕ್ಕೋ ,ಇದ್ನೆಲ್ಲೋ ನೋಡಿದ ನೆನಪಾಗಿ
ತುಂಟ ,ಕಣ್ತಪ್ಪಿಸಿ ಓಡಿತಲ್ಲ
ಹಿಡಿಯಲಾಗದ ಬೆಳಕಾಗಿ

ಒಮ್ಮೆಯೂ ಕಂಡಿಲ್ಲ ಮೋಜಿನ ಬೆಳಕಿನೂರು
ಬಚ್ಚಿಟ್ಟ ಬಣ್ಣದಾಸೆಯ ಕೂಗು ಕೇಳುವರಾರು
ಇದುವೆ ಜೀವನವೆಂಬ ಭ್ರಾಂತು...
ಕತ್ತಲಿನ ರಹಸ್ಯ ಸಾಕೆಂಬಂತೆ
ಗುಹೆಯೊಂದು ಮಲಗಿದೆ ಅತ್ತು
ಕೈ ಬೀಸಿ ಕರೆದರೂ ,
ಹಿಂತಿರುಗಿ ನೋಡದೆ ನಡೆಯಿತು
ಮರೀಚಿಕೆಯಲ್ಲೇ ಹೊಸೆದ ಕನಸಿನೆಡೆಗೆ .

ನನ್ನ ಬಾಳಿನಲ್ಲಿ ಮರೆಯಲಾಗದ ಅಮೃತ ಘಳಿಗೆಯಾಗಿ
ಹೃದಯದಲ್ಲೊಂದು ಸುಂದರ ಪ್ರಶ್ನೆಯಾಗಿ
ನನ್ನ ಪುಟ್ಟ ಗೆಳೆಯ ,
ಹೂ ಮುತ್ತೊಂದನ್ನಿತ್ತು
ಮರಳಿ ಬರುವೇನೆಂದು, ಮಾಯವಾಗಿದೆ !
ಇದು ನನ್ನ ಹುಚ್ಚ ಮನಸೇ ..ಹಗಲು ಕನಸೇ ..
ತಿಳಿಯದಾಗಿದೆ !

- ಆರತಿ ಘಟಿಕಾರ್, ದುಬೈ

ವಿಷಾದ

ಅಂದು ಅಂಕೆಯಲ್ಲಿದ್ದೆ ನಾನು
ಬಂದು ಕರೆದೊಯ್ದೆ ನೀನು
ಬೆಂಕಿಯನ್ನು ಹಚ್ಚಿ ಬೇಲಿಗೆ

ಹಲವು ದಿನಗಳು ಬಾಳಲಿಲ್ಲ
ಒಲವು ಹಾಗೇ ಬಾಡಿತಲ್ಲ
ಶಂಕೆಯದು ಚಾಚಿತು ನಾಲಿಗೆ;

ಕೊಂಕು ಮಾತನು ಹೊಸೆದೆಯಲ್ಲ
ಮಂಕು ಕವಿಸಿ ಮನಕೆ ನೀನು
ಉರಿಯ ಹಚ್ಚಿ ಹೂ ಮಾಲೆಗೆ;

ನೇಯ್ದ ಕನಸೆಲ್ಲ ಕೊಯ್ದೆ
ನಾಳೆ ಬಾಳನು ಎಳೆದು ಹೊಯ್ದೆ
ಹಾಲಹಲವನು ಬೆರೆಸಿ ನೊರೆ ಹಾಲಿಗೆ.

-ಮಾಲು, ಅಡಿಲೈಡ್

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ಐದು ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧.ಈ ಋಷಿಗಳಿಗೇಕೋ ಕೋಪ ಬಂದಹಾಗಿದೆ.

■		

೨. ನಾದಮಯ ಸಂಗೀತವಲ್ಲ ಇದು, ಕಷ್ಟದಲ್ಲಿ ಇರುವವರ ಕೂಗು.

	■		

೩. ಶಿವನನ್ನು ಹಿಡಿಯಲು ಹೋದರೆ ಹಸುವಿನ ಕಿವಿ ಸಿಕ್ಕಬೇಕೆ ಇಲ್ಲಿ?

■		

೪. ಕಣಕವೊಂದಿದ್ದರೆ ಸಾಕೆ? ಹುಡುಕಿ ತನ್ನಿರಿ ಅದರ ಜೊತೆಗಾರನನ್ನ.

■		

೫. ಈ ಜಂಬಗಾತಿ ತಾನು ಕೂಗಿದರೇನೇ ಹಗಲು ಹರಿಯುವುದೆಂದುಕೊಡಿದ್ದಾಳೆ.

	■

6. ರಾಹುವಿನ ಜೊತೆಗಾರನಿಗೆ ಹೊಗೆ ಹತ್ತಿ ಎಲ್ಲಿಯೂ ಸಲ್ಲದವನಾಗಿ ಓಡುತ್ತಿರುವಂತಿದೆ.

■			

ಉತ್ತರ: ಹಳ್ಳಿಗಾಡಿನಲ್ಲಿ ಕೆಮ್ಮಣ್ಣು ಚಿಮ್ಮುತ್ತಾ ಬರುವ ಸುಂದರ ಶುಭ ಸಮಯ.

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಅಕ್ಟೋಬರ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ನೆಪ್ಟೆಂಬರ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದ ಅನೇಕ ಜನರಿಗೆ ನಮ್ಮ ಧನ್ಯವಾದಗಳು. ಅವರ ಪೈಕಿ ಎಲ್ಲಾ ಸರಿ ಉತ್ತರ ಕಳುಹಿಸಿರುವ ಇವರಿಗೆ ನಮ್ಮ ಅಭಿನಂದನೆಗಳು.

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಚಂದ್ರಿಕಾ ಉದಯ್, ಸಿಡ್ನಿ
- ಆಶಾ ಫಣಿರಾಜ್, ಬೆಂಗಳೂರು
- ಹರಿಣಿ ರಾವ್, ನವದೆಹಲಿ
- ಬಿ.ಆರ್. ವತ್ಸಲಾ ದ್ವಾರಕನಾಥ್, ಕೆ.ಜಿ.ಎಫ್

ನೆಪ್ಟೆಂಬರ್ ತಿಂಗಳ ಪದಪುಂಜದ ಉತ್ತರ

ಬಂದವರಿಗೆ ಮುಂಬಾಗಿಲಿನಲ್ಲೇ ಮಂಗಳ ಕಾರ್ಯದ ಸೂಚನೆ

ತೋ	ರ	ಣ

ಅವನು ಬಲು ತಾಳ್ಮೆಯ ಗುಣವುಳ್ಳವನು

ಸ	ಹ	ನ	ಶೀ	ಲ

ಬಿಟ್ಟಿದೇವನು ವಿಷ್ಣುವರ್ಧನನಾಗಿ ಬದಲಾಗಲು ಕಾರಣವಾದ ಧಾರ್ಮಿಕ ಪಂಥ.

ವೈ	ಷ್ಣ	ವ

ಹಸುವಿಗೆ ಮತ್ತೇರಿಸಿದ ಸುಂದರಾಂಗ

ಮ	ದ	ನ

ಬುದ್ಧನಿಗೆ ಜ್ಞಾನೋದಯವಾದ ಊರಿನಲ್ಲಿ ಬಿದ್ದಾಗ ಆದದ್ದು

ಗಾ	ಯ

ಉತ್ತರ: ಸದ್ಯ. ಈ ಪ್ರದೇಶದ ಹವಮಾನದಲ್ಲಿ ಹೆಚ್ಚುಕಡಿಮೆ ಇರುವುದಿಲ್ಲ.

ಸ	ಮ	ಶೀ	ತೋ	ಷ್ಣ	ವ	ಲ	ಯ

Educational, Legal, financial, Health,
Reality management services
Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL
0401193852

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

15 – 8

ರಚನೆ: ಪುಷ್ಪ ವೆಂಕಟೇಶ್

ರೀ ಕಮಲಮ್ಮ .. ಬೇಗ ಮನೆಯಿಂದ ಆಚೆ ಬನ್ನಿ ಹೊಸ ಸುದ್ದಿ ಇದೆ , ಹೇಳಕ್ಕೆ .. ಬೇಗ ಬರದೆ ಹೋದ್ರೆ ಒಳ್ಳೆ ಅವಕಾಶ ತಪ್ಪಿ ಹೋದೀತು ..

ಏನ್ರೀ ವಿಶಾಲೂ ಅಷ್ಟು ಅವಸರ ಮಾಡ್ತಾ ಇದ್ದೀರಾ .. ಒಗ್ಗರಣೆ ಸಿನಿಮಾ ನೋಡಿ ಬರೋದ್ರಲ್ಲಿ ಏನು ಅಂತದ್ದು ನಡೆದಿದ್ದು ?

ಕಮಲಮ್ಮ ನೀವು ಸಾರಿಗೆ ಒಗ್ಗರಣೆ ಹಾಕೋದು ಬಿಟ್ಟು, ಟಿವಿಯಲ್ಲಿ ಒಗ್ಗರಣೆ ನೋಡ್ತಾ ಇದ್ದರೆ ಏನೂ ಸಮಾಚಾರ ಗೊತ್ತಾಗಲ್ಲ . ಮಂಗಳ ಗೊತ್ತಲ್ಲ ...

ಯಾರು ಮಂಗಳ?.. ಆಚೆ ಬೀದಿ, ಎರಡನೇ ಮನೆ ಮಂಗಳನಾ .. ಗೊತ್ತು ಬಿಡಿ, ಅವರ ಮನೆ ಹಾಲಿನವಳು –ಕೆಲಸದವಳು ಇಬ್ಬರೂ ನಮ್ಮ ಮನೆಗೆ ಬಂದು ಎಲ್ಲಾ ಸುದ್ದಿ ಮುಟ್ಟಿಸ್ತಾರೆ. ಮಂಗಳನ ಮನೆನಲ್ಲಿ ಹೊಸ ಸ್ಮಾರ್ಟ್ ಟಿವಿನೋ ಫ್ರಿಡ್ಜೋ ಬಂದಿರಬೇಕು , ಭಾರಿ ಕುಳ ಬಿಡ್ರೀ ಅವರು .

ಕಮಲಮ್ಮ ನಿಮಗೆ ಆಚೆ ಮನೆ ಸುಬ್ಬಮ್ಮ, ಈಚೆ ಮನೆ ಮಂಗಳಮ್ಮ ಬಿಟ್ಟು ಬೇರೆ ಯಾರಾರು ನೆನಪಿಗೆ ಬರ್ತಾರ ? ಅದು ಹೋಗಲಿ ಬಿಡಿ. ಮಂಗಳ ಗ್ರಹ ಗೊತ್ತೇನ್ರೀ.

ಅದಾ ಗೊತ್ತಲ್ಲ, ದಿನಾ ಟಿವಿಯಲ್ಲಿ ರತ್ನಾಭರಣ ಸಮೇತ ಸ್ವಾಮೀಜಿ ಶಾಸ್ತ್ರ ಹೇಳ್ತಾರಲ್ಲ. ಯಾವ ಗ್ರಹ ಯಾವ ಮನೆಯಲ್ಲಿದೆ. ಯಾರು ಏನೇನು ಶಾಂತಿ ಮಾಡ್ಬೇಕು. ಏನು ತೊಂದರೆಗೆ ಏನು ಪರಿಹಾರ ಇದೆ. ನಾನಂತೂ ಮಿಸ್ ಮಾಡಲ್ಲ ರೀ. ಕಾಫಿ ಲೋಟ ಕೈನಲ್ಲಿ ಹಿಡಿದು ಸೋಮವಾರದಿಂದ ಶುಕ್ರವಾರದ ತನಕ ಏನೇನು ಗ್ರಹ ಗತಿ ಅಂತ ಕಣ್ಣಲ್ಲಿ ಕಣ್ಣಿಟ್ಟು ನೋಡ್ತೀನಿ. ಅದರ ಪ್ರಕಾರಾನೆ ನಡೆದುಕೊಳ್ತೀನಿ.

ಕಮಲಮ್ಮ ನೀವು ಬ್ರೇಕಿಂಗ್ ನ್ಯೂಸ್ ನೋಡಲಿಲ್ಲವೇನೋ... ಸುಮಾರು ಬೆಳಿಗ್ಗೆ ಇಂದ ಅದೇ ತೋರಿಸುತ್ತಾ ಇದ್ದಾರೆ ಎಲ್ಲಾ ಚಾನೆಲ್ಲಳಲ್ಲಿ.

ಗೊತ್ತು ಬಿಡ್ರೀ ಬ್ರೇಕಿಂಗ್ ನ್ಯೂಸ್ ವಿಷಯ. ಮೋದಿ ಅಮೇರಿಕಾಗೆ ಹೋಗಿ ಮಾತಾಡಿದ್ದು ... ಒಬಾಮ ಜೊತೆ ಒಬ್ಬಟ್ಟು ಚಿತ್ರಾನ್ನ ತಿಂದು ಊರು ಸುತ್ತಿದ್ದು ಎಲ್ಲಾ ಬ್ರೇಕಿಂಗ್ ನ್ಯೂಸ್ ಅಂತ ತೋರಿಸ್ತಾನೆ ಇದ್ದಾರೆ ... ನಾನಿಲ್ಲಿ ದಸರಾಗೆ ಅಂತ ಒಬ್ಬಟ್ಟು ಮಾಡ್ತಾ ಇರಬೇಕಾರೆ ನೋಡಿದೆ.

ಅಯ್ಯೋ ಕಮಲಮ್ಮ ನಿಮಗೆ ನಾನು ಹೇಗೆ ಹೇಳಲಿ, ನಮ್ಮ ಭಾರತ ದೇಶ ದೊಡ್ಡ ಹೆಸರು ಮಾಡಿತು ಕಣ್ರೀ. ಐತಿಹಾಸಿಕ ಸುದ್ದಿ ಕಣ್ರೀ.

ವಿಶಾಲೂ, ಐತಿಹಾಸಿಕ ಸುದ್ದಿ ಅಂದ್ರೆ ಮತ್ತೆ ಒನಕೆ ಒಬವ್ವನೋ ಕಿತ್ತೂರ್ ರಾಣಿ ಚೆನ್ನಮ್ಮನೋ ಹುಟ್ಟಿ ಬಂದಿರಬೇಕೋ ...

ಕಮಲಮ್ಮ ನೀವು ಯಾವ ಶತಮಾನದಲ್ಲಿ ಇದ್ದೀರಾ ... ಈಗ ಮನೆ ಮನೆಯಲ್ಲಿ ಓಬವ್ವ, ಕಿತ್ತೂರ್ ರಾಣಿ ಚೆನ್ನಮ್ಮನಗಿಂತ ಭಾರಿ ಜೋರಿನ ಹುಡುಗಿಯರಿಗೇನು ಕಡಿಮೇನೆ ?

ವಿಶಾಲೂ ನೀವು ಏನು ಸುದ್ದಿ ಬಗ್ಗೆ ಹೇಳ್ತಾ ಇದ್ದೀರಾ ಸ್ವಲ್ಪ ಬಿಡಿಸಿ ಹೇಳ್ತೀರ ... ನನಗೆ ಅರ್ಥ ಆಗೋ ಹಾಗೆ ...

ಕಮಲಮ್ಮ ಅದಕ್ಕೆ ತಾನೇ ನಾನು ಬೆಳಿಗ್ಗೆ ಬೆಳಿಗ್ಗೆನೆ ನಿಮ್ಮ ಮನೆಗೆ ಬಂದಿದ್ದು...

ನಮ್ಮ ಭಾರತದ ವಿಜ್ಞಾನಿಗಳು ಎಲ್ಲಾ ಸೇರಿ ಮಂಗಳ ಗ್ರಹಕ್ಕೆ ಬಾಹ್ಯಾಕಾಶ ನೌಕೆ ಕಳಿಸಿದ್ದರು 10 ತಿಂಗಳ ಹಿಂದೆ. ಅದು ಈಗ ಮಂಗಳ ಗ್ರಹ ಹತ್ತಿರ ಮುಟ್ಟಿದೆ ಕಣ್ರೀ. ಮೊದಲ್ನೇ ಬಾರಿಗೆ ಮಂಗಳಗ್ರಹ ಸುತ್ತುತ್ತಾ ಇದೆ ಅದರ ಫೋಟೋ ತೆಗೆದು ಭೂಮಿಗೆ ಕಳಿಸುತ್ತೆ .. ಎಲ್ಲಾ ದೇಶದಲ್ಲೂ ನಮ್ಮ ಭಾರತದ ಬಗ್ಗೆನೇ ಕಣ್ರೀ ಮಾತು ಕಥೆ. ಎಷ್ಟು ಹೆಮ್ಮೆ ಆಗ್ತಾ ಇಲ್ವೆ ನಮಗೆ .. ನಮ್ಮ ದೇಶ ನಮ್ಮ ಜನ ಅವರಿಗೂ ಒಂದು ದೊಡ್ಡ ಹೆಸರು .. ಮಂಗಳ ಗ್ರಹ , ಅದರಲ್ಲೇನಿದೆ ನೀರು, ಗಾಳಿ ಇದೆಯಾ ಅಂತ ಎಲ್ಲ ಗೊತ್ತಾಗುತ್ತೆ .

ಹೌದೇನ್ರೀ ವಿಶಾಲೂ. ಒಳ್ಳೆ ಭಾರಿ ಸುದ್ದಿನೇ ಹೇಳಿದ್ರೀ.. ಇನ್ನು ಮಂಗಳ ಗ್ರಹಕ್ಕೆ ಆಟೋ ಬರಲ್ಲ ಅಂತಾರೆ, ಇನ್ನು ಆಟೋದವರ ಜೊತೆ ಜಗಳ ಮಾಡಬೇಕು. ಅಲ್ಲಿ ಸಿಗೋ ಸೈಟ್ /ಮನೆಗೆ ಅಂತ Q ನಿಲ್ಲಬೇಕು. ಮಂಗಳ ಗ್ರಹಕ್ಕೆ ಹೋಗಕ್ಕೆ ನಮ್ಮ ಜನ ತುದಿಗಾಲ ಮೇಲೆ ನಿಲ್ತಾರೆ ನೋಡ್ತಾ ಇರಿ ಬೇಕಾದ್ರೆ.. ಇಂಪೋರ್ಟೆಡ್ ತರಕಾರಿ ಹಣ್ಣು ಬಂದ ಹಾಗೆ, ಇನ್ನು ಇದು ಮಂಗಳ ಗ್ರಹದಲ್ಲಿ ಬೆಳೆದಿದ್ದು ಅಂತ ಬೆಲೆ ಇನ್ನೂ ಜಾಸ್ತಿ ಮಾಡ್ತಾರೆ ನಮ್ಮ ತರಕಾರಿ ಹಣ್ಣು ಮಾರಿಕೊಂಡು ಬರೋ ನಿಂಗಿ.

ಆಚೆ ಮನೆ ಮಂಗಳ ಬಂದು ನಾನು" ಮಂಗಳ ರಿಟರ್ನ್ಡ್" ಅಂದ್ರೆ ನಮ್ಮ ಗತಿ ಏನ್ರೀ .. ನಾವು ಬೇಗ ವೀಸಾ ಪಾಸ್ಪೋರ್ಟ್ ಮಾಡಿಸ್ಕೊಂಡು ಮಂಗಳಕ್ಕೆ ಹೋಗಿ ಬಂದು ಬಿಡಬೇಕು ಬೇಗ !

ಕಮಲಮ್ಮ ನೀವು ಎಲ್ಲೋ ಹೋಗಿಬಿಡ್ತೀರಿ . ನಾ ಬರ್ತೀನಿ ಕಣ್ರೀ.. ನೀವು ಹುಷಾರು . ಯಾರಾರು ಬಂದು ಮಂಗಳ ಗ್ರಹಕ್ಕೆ ಫ್ರೀ ಟಿಕೆಟ್ ಕೊಡ್ತೀವಿ ಬೇಕಾ ಅಂದ್ರೆ , ಬೇಕು ಅಂತ ಅವರ ಹಿಂದೆ ಹೋಗಬೇಡಿ !!! ▪

ಹೊಸ ಬದುಕು

ಲೇಖಕರು: ನಾಗಶೈಲ ಕುಮಾರ್

ಅಂದು ದೀಪಾವಳಿ, ಎಲ್ಲೆಲ್ಲೂ ಬೆಳಕಿನ ಹೊನಲು, ಪಟಾಕಿಗಳ ಆರ್ಭಟ, ಸಿಹಿತಿಂಡಿಗಳ ಸುಗ್ಗಿ. ಮನೆಗಳ ಮುಂದೆಲ್ಲಾ ದೀಪಗಳ ಸಾಲು ಸಾಲು, ವಿವಿಧ ರೀತಿಯ ಆಕಾಶ ಬುಟ್ಟಿಗಳ ಅಲಂಕಾರ. ಪಟಾಕಿಗಳಂತೂ ಅದೆಷ್ಟು ಬಗೆ, ಮನ ಮೋಹಕ ವಿನ್ಯಾಸಗಳನ್ನು ತಾಳುತ್ತ ಹೊಮ್ಮಿ ಬರುವುದೊಂದೆಡೆಯಾದರೆ, ಬೆಚ್ಚಿ ಬೀಳುವಂತ, ಎದೆ ನಡುಗಿಸುವ ಶಬ್ದ ಹೊಮ್ಮಿಸುವ ಮದ್ದು ಗುಂಡುಗಳು ಮತ್ತೊಂದೆಡೆ. ಇವೆಲ್ಲದರ ನಡುವೆ ಹೊಸ ಹೊಸ ಬಟ್ಟೆಗಳನ್ನು ತೊಟ್ಟು, ಆಭರಣಗಳನ್ನು ಧರಿಸಿ ಆನಂದಿಸುತ್ತಿರುವ ಜನ, ಅದರಲ್ಲೂ ವಿಶೇಷವಾಗಿ ಮಕ್ಕಳಿಗಂತೂ ಸಂಭ್ರಮವೋ ಸಂಭ್ರಮ. ಒಟ್ಟಿನಲ್ಲಿ ಊರೆಲ್ಲಾ ಸಡಗರದಿಂದ ನಲಿಯುತ್ತಿತ್ತು.

ಸೊಂಟದಿಂದ ಜಾರಿ ಜಾರಿ ಹೋಗುತ್ತಿದ್ದ ಮಗುವನ್ನು ಮೇಲಕ್ಕೆಳೆದುಕೊಳ್ಳುತ್ತಾ ಅವಳು ಹೆಜ್ಜೆ ಹಾಕುತ್ತಿದ್ದಳು. ಎರಡು ದಿನಗಳಿಂದ ಹೊಟ್ಟೆಗೆ ಸರಿಯಾಗಿ ಊಟವಿಲ್ಲದೆ ಕಣ್ಣುಗಳು ಕತ್ತಲಿಡುತ್ತಿತ್ತು. "ಅಮ್ಮಾ, ತಾಯೀ" ಎಂದು ಕೂಗಿ ಕೂಗಿಯೇ ನಿತ್ರಾಣವಾಗಿ ಹೋಗಿದ್ದಳು. ಈಗಂತೂ ಅಪ್ಪಿ ತಪ್ಪಿ ಕೂಗಲು ಬಾಯಿ ತೆರೆದರೂ, ಕಿವಿಗಡಚಿಕ್ಕುವ ಪಟಾಕಿಗಳ ಸದ್ದು ಇವಳ ಕೂಗನ್ನು ನುಂಗಿಬಿಡುತ್ತಿತ್ತು. ವಿಧಿ ಇಲ್ಲದೆ ಮಗುವಿನ ಹೊಟ್ಟೆಗಾಗಿ ಕೂಗಿ ಬೇಡಲೇ ಬೇಕೆಂದು ಕೂಗುತ್ತಾ, ಕಷ್ಟ ಪಟ್ಟು ಮುಂದೆ ಮುಂದೆ ಹೆಜ್ಜೆ ಹಾಕುತ್ತಿದ್ದಳು. ಮಗುವಿಗಂತೂ ಅತ್ತೂ ಅತ್ತು ಬಸವಳಿದು, ಇನ್ನು ಅಳಲು ಶಕ್ತಿಯೇ ಇಲ್ಲವಾಗಿತ್ತು. ಹಾಗೆಯೇ ಅದರಮ್ಮನ ಬುಜದ ಮೇಲೆ ತಲೆಯಿಟ್ಟುಕೊಂಡು, ಪಟಾಕಿಗಳ ಸದ್ದಿಗೆ ಬೆಚ್ಚಿ ಬೀಳುತ್ತಾ ಆಗಾಗ ಸಣ್ಣದಾಗಿ ದನಿ ತೆಗೆಯುತ್ತಿತ್ತು.

ಆ ಭಿಕ್ಷುಕಿಗೆ ಎಲ್ಲೆಲ್ಲಿ ನೋಡಿದರೂ ಕಾಣುತ್ತಿದ್ದುದು ತಿಂಡಿ ತಿನಿಸುಗಳೇ. ಅಂಗಡಿಗಳಲ್ಲಿ ಗೋಪುರಗಳಂತೆ ಜೋಡಿಸಿಟ್ಟ ಸಿಹಿ ತಿನಿಸುಗಳು. ಮನೆಯಿಂದ ಮನೆಗೆ ತಟ್ಟೆಗಳಲ್ಲಿ ಬಟ್ಟೆ ಮುಚ್ಚಿ ಕೊಂಡೊಯ್ಯುತ್ತಿದ್ದ ತಿನಿಸುಗಳು, ಆಡುತ್ತಿರುವ ಮಕ್ಕಳ ಕೈಯ್ಯಲ್ಲಿ ತಿನಿಸುಗಳು. ಎದುರಿಗೆ ಕಾಣುತ್ತಿದ್ದುದನ್ನು ಬಿಟ್ಟ ಕಣ್ಣಿನಿಂದ ನೋಡುತ್ತಾ ಮೈ ಮರೆತು ನಿಲ್ಲುತ್ತಿದ್ದಳು. ಕಣ್ಣೆದುರಿಗೇ ಇರುವ ಆಹಾರಗಳೆಲ್ಲವೂ ಅವಳ ಪಾಲಿಗೆ ಕನಸೇ ಆಗಿತ್ತು.

ಮಗು ಮತ್ತೆ ಹಸಿವಿನಿಂದ ಅಳಲಾರಂಭಿಸಿತು. ನಿಟ್ಟುಸಿರುಡುತ್ತ ಅವಳು, "ಅಮ್ಮಾ, ಮಗುವಿಗೆ ಏನಾದರೂ ಕವಳ ನೀಡಿ ಅಮ್ಮಾ," ಎಂದು ಕೂಗುತ್ತಾ ನಡೆದಳು. ಎಷ್ಟು ಜನದ ಕಿವಿಗೆ ಇವಳ ಕೂಗು ಕೇಳುತ್ತಿತ್ತೋ? ಕೇಳಿಸಿದರೂ,

"ಇನ್ನೂ ಪೂಜೆ ಆಗಿಲ್ಲ, ಹೋಗಮ್ಮ,"

" ಒಳ್ಳೆ ದೀಪ ಹಚ್ಚುವ ಸಮಯದಲ್ಲಿ ಬಂದು ಬಿಡ್ತಾರೆ, ಹೊತ್ತಿಲ್ಲ ಗೊತ್ತಿಲ್ಲ ಇವಕ್ಕೆ"

"ಹಬ್ಬದ ದಿನ ಸಂಜೆ ಹೊತ್ನಲ್ಲಿ ಲಕ್ಷ್ಮಿ ಬರ್ತಾಳೆ, ಈವಾಗ್ ಯಾರ್ ಕವಳ ಹಾಕ್ತಾರೆ, ನಡಿ ನಡಿ"

ಹೀಗೆಲ್ಲಾ ಉತ್ತರ ಕೊಟ್ಟು, ಮುಂದೆ ತಳ್ಳುತ್ತಿದ್ದರು.

ಒಂದಿಬ್ಬರು, "ನಮ್ಮದೆಲ್ಲಾ ಊಟ ಆದಮೇಲೆ ಬಾ, ಏನಾದರೂ ಮಿಕ್ಕಿದ್ದರೆ ಹಾಕ್ತೀವಿ", ಎಂದರೆ, ಪಾಪ ಅವಳು ಆ ಮನೆಯನ್ನು ಆಸೆಯಿಂದ ಗುರುತಿಟ್ಟುಕೊಂಡು ಮುಂದೆ ಸಾಗುತ್ತಿದ್ದಳು.

"ಏಯ್ ಕವಳಾ, ಬಾಮ್ಮ ಇಲ್ಲಿ," ಅಂತೂ ಯಾರೋ ಅವಳನ್ನು ಕರೆದು " ಮಗುವಿಗೆ ತಿನ್ನಿಸಮ್ಮ, ಪಾಪ ಹಬ್ಬ, ಅದೂ ಹೊಟ್ಟೆ ತುಂಬಾ ತಿನ್ನಲಿ" ಎಂದು ಅವಳ ಪಾತ್ರೆಗೆ ಹಬೆಯಾಡುತ್ತಿದ್ದ ಊಟ ಹಾಕಿದರು.

ಮಗುವನ್ನು ಕೆಳಗಿಳಿಸಿ ಎರಡೂ ಕೈ ಜೋಡಿಸಿ ನಮಸ್ಕರಿಸಿದಳು ಆ ತಾಯಿಗೆ.

ಅಲ್ಲೇ ರಸ್ತೆ ಬದಿಗೆ ಕುಳಿತು, ಬಿಸಿ ಬಿಸಿಯಾಗಿದ್ದ ಅನ್ನವನ್ನು ಮಗುವಿಗೆ ತಿನ್ನಿಸಿದಳು. ಅಮ್ಮ ಕೈಗೆ ಅನ್ನ ತೆಗೆದುಕೊಳ್ಳುವ ಮೊದಲೇ ಆ ಎಂದು ಬಾಯ್ದೆರೆದು ಕಾಯುತ್ತಾ, ಆ ಮಗು ಅಷ್ಟೂ ಅನ್ನವನ್ನು ತಿಂದು ಮುಗಿಸಿತ್ತು. ಮಗುವಿನ ಹಸಿವು ನೀಗಿದ ಸಮಾಧಾನ ಆ ಕ್ಷಣಕ್ಕೆ ಅವಳಿಗಾಯಿತು. ಆದರೆ ತನ್ನ ಹಸಿವಿನ ಸಂಕಟ ಇನ್ನೂ ಹೆಚ್ಚಾದಂತೆನಿಸಿತ್ತು ಅವಳಿಗೆ. ಇನ್ನು ಸ್ವಲ್ಪ ಹೆಚ್ಚಾದರೂ ನೀಡಿದ್ದರೆ ತಾನು ಕೂಡ ಕೊಂಚ ಹಸಿವನ್ನು ನೀಗಿಸಿಕೊಳ್ಳಬಹುದಿತ್ತೆಂದೆನಿಸಿತಾದರೂ, ಅಷ್ಟಾದರೂ ಕೊಡುವವರಿದ್ದಾರಲ್ಲ, ಮುಂದೆ ತನಗೂ ಯಾರಾದರೂ ನೀಡಬಹುದು ಎಂದುಕೊಳ್ಳುತ್ತಾ, ಮುಂದೆ ನಡೆದಳು.

ಆದರೆ ಅಂದವಳಿಗೆ ಬರಿಯ ನಿರಾಶೆಯೇ. ಇನ್ನು ನಡೆಯಲು ಶಕ್ತಿಯೇ ಇಲ್ಲವೆಂದೆನಿಸಿದಾಗ, ಪ್ರತಿ ರಾತ್ರಿ ತಾನು ಮಲಗುತ್ತಿದ್ದ ಜಾಗದೆಡೆಗೆ ನಿಧಾನವಾಗಿ ನಡೆದಳು.

****

ಪರ ರಾಜ್ಯಕ್ಕೆ ಹೋಗುವ ಹೆದ್ದಾರಿ ಬದಿಯಲ್ಲಿತ್ತು ಆ ಸ್ಮಶಾಣ, ಅದೇ ಅವಳ ಪ್ರತಿ ರಾತ್ರಿಯ ತಂಗುದಾಣ. ಬ್ರಿಟೀಷರ ಕಾಲದಲ್ಲಿ ಆರಂಭವಾಗಿದ್ದ ಆ ಸ್ಮಶಾಣ ಕ್ರೈಸ್ತರಿಗೆ ಮೀಸಲಾಗಿತ್ತು. ಅಲ್ಲಿನ ಕಾವಲುಗಾರ ಜ್ಞಾನಪ್ಪ, ತನ್ನ ಮನೆಯ ಹೊರಗಿನ ಚಾವಡಿಯಲ್ಲಿ ಅವಳಿಗೆ ಮಲಗಲು ಅನುಕೂಲ ಮಾಡಿಕೊಟ್ಟಿದ್ದ. ಅವಳ ಪಾಲಿಗೆ ಅಣ್ಣನಾಗಿ, ಹಿತೈಷಿಯಾಗಿ ಕಂಡಿದ್ದ. ಅವನಾದರೂ ಇದ್ದಿದ್ದರೆ ಅವಳು ತಿಂದದ್ದಾಯಿತೆ ವಿಚಾರಿಸಿ, ಇಲ್ಲವೆಂದಲ್ಲಿ ಏನಾದರೂ ಚೂರೋ ಪಾರೋ ಅವಳಿಗೆ ನೀಡುತ್ತಿದ್ದ. ಇಂದು ಅವನೂ ಇಲ್ಲ, ಊರಿಗೆ ಹೋಗಿದ್ದ.

ಮುಂದಿನ ಪುಟ ನೋಡಿ ...

ಹೊಟ್ಟೆ ತುಂಬಾ ತಿಂದಿದ್ದ ಮಗುವಿಗೆ ಚೆನ್ನಾಗಿ ನಿದ್ದೆ ಹತ್ತಿತ್ತು. ಅಮ್ಮನನ್ನು ಭದ್ರವಾಗಿ ಅಪ್ಪಿ ಮಲಗಿತ್ತು. ಕೆಳಗೊಂದು ಕಂಬಳಿಯ ಮೇಲೆ ಮಗುವನ್ನು ಮಲಗಿಸಿ, ತಾನೂ ಜೊತೆಗೆ ಉರುಳಿಕೊಂಡಳು. ಹಸಿವಿನ ಸಂಕಟದಿಂದ ಎಷ್ಟು ಹೊತ್ತಾದರೂ ನಿದ್ದೆ ಬಾರದೆ ತಲೆ ಸುತ್ತಲಾರಂಭಿಸಿತ್ತು. ನೀರನ್ನಾದರೂ ಹೊಟ್ಟೆ ತುಂಬಾ ಕುಡಿದು ಬರೋಣವೆಂದು, ಮಗುವನ್ನು ಮೆಲ್ಲನೆ ಪಕ್ಕಕ್ಕೆ ಸರಿಸಿ ಮೇಲೆದ್ದವಳು, ತಟ್ಟಾಡುತ್ತಾ ಸ್ಮಶಾಣದ ಒಂದು ಮೂಲೆಯಲ್ಲಿದ್ದ ಕೊಳಾಯಿಯ ಬಳಿಗೆ ಬಂದಳು. ಪುಣ್ಯಕ್ಕೆ ಅಲ್ಲಿ ಸದಾ ಕಾಲ ಧಾರಾಳವಾಗಿ ನೀರು ಸುರಿಯುತ್ತಿರುತ್ತಿತ್ತು. ಬೊಗಸೆ ಬೊಗಸೆ ನೀರು ಕುಡಿದಳು, ಯಾರನ್ನೂ ಬೇಡದೆ ಅವಳಿಗೆ ಧಾರಾಳವಾಗಿ ಸಿಗುತ್ತಿದ್ದುದು ಅದೊಂದೇ.

ಹೊಟ್ಟೆಯ ಸಂಕಟ ತುಸು ಕಡಿಮೆಯಾದಂತೆನಿಸಿತು. ಮೈಯ್ಯಲ್ಲಿ ಸ್ವಲ್ಪ ಚೇತನ ಬಂದಿತ್ತು, ಮನಸ್ಸಿಗೆ ಆಲೋಚನಾ ಶಕ್ತಿಯೂ ಬಂದಿತ್ತು. ಎರಡು ದಿನದ ಉಪವಾಸದ ಅನುಭವ ಅವಳಲ್ಲಿ ಚಿಂತೆ ಮೂಡಿಸಿತ್ತು.

ಅವಳೇನೂ ಹುಟ್ಟು ಭಿಕ್ಷುಕಿಯಲ್ಲ. ತಂದೆ ತಾಯಿಯರು ಮಾನವಂತರಾಗಿ ಬಾಳಿ ಅವಳನ್ನು ಬೆಳಸಿದ್ದರು. ಅವರೊಡನೆ ಇವಳು ಕೂಲಿ ನಾಲಿ ಮಾಡಿ ಕಷ್ಟ ಸುಖ ಉಂಡು ಬೆಳೆದಿದ್ದಳು. ಒಬ್ಬ ಕೂಲಿಯವನನ್ನೇ ಮದುವೆಯೂ ಆಗಿ ನಗರಕ್ಕೆ ಬಂದು, ದುಡಿದು ಜೀವನ ನಡೆಸಿದ್ದಳು. ಒಂದು ಮಗುವಾದ ನಂತರ ಗಂಡನೊಡನೆ ಹಳ್ಳಿಗೆ ಜಾತ್ರೆಗೆಂದು ಹೋದಾಗ, ಅಪಘಾತವೊಂದರಲ್ಲಿ, ಹೆತ್ತವರು, ಕೈ ಹಿಡಿದವನು ಎಲ್ಲರನ್ನೂ ಕಳೆದುಕೊಂಡು, ಮಗುವಿನೊಡನೆ ಮತ್ತೆ ನಗರಕ್ಕೆ ಹಿಂದಿರುಗಿದ್ದಳು.

ಒಂಟಿಯಾದ ಮೇಲೆ ಜೀವನ ಮುಂಚೆನಷ್ಟು ಸುಲಭವಿರಲಿಲ್ಲ. ಯಾರೂ ಕೆಲಸ ಕೊಡಲೂ ಸಿದ್ಧರಿರಲಿಲ್ಲ. ತಿನ್ನಲು, ತೊಡಲು ಸರಿಯಾಗಿ ಇಲ್ಲದೆ, ಕೂಲಿಗಾಗಿ ಅಲೆಯುತ್ತಿದ್ದ ಅವಳನ್ನು ಎಲ್ಲರೂ ಅನುಮಾನದಿಂದಲೇ ನೋಡುತ್ತಿದ್ದರು. ಮನೆ ಕೆಲಸಕ್ಕೆಂದು ಕೇಳಿದರೆ ಗುರುತು ಪರಿಚಯವಿಲ್ಲದವಳೆಂದು ಯಾರೂ ಹತ್ತಿರ ಸೇರಿಸುತ್ತಿರಲಿಲ್ಲ. ಕಡೆಗೆ ಮಗುವಿಗಾಗಿ ವಿಧಿ ಇಲ್ಲದೆ, ಸಂಕೋಚದಿಂದಲೇ ಬಿಕ್ಷೆ ಬೇಡಲಾರಂಭಿಸಿದ್ದಳು. ದಿನಗಳದಂತೆ ಅದುವೇ ಅಭ್ಯಾಸವೂ ಆಯಿತು.

ಒಮ್ಮೆ ರಾತ್ರಿ ಸ್ಮಶಾಣದ ಹೊರಗಡೆ ಗೋಡೆ ಬದಿಯಲ್ಲಿ ಚಳಿಯಲ್ಲಿ ಮಗುವನ್ನಪ್ಪಿ ಮಲಗಿದ್ದಾಗ, ಅಲ್ಲಿನ ಕಾವಲುಗಾರ ಜ್ಞಾನಪ್ಪ ಅವಳನ್ನು ಒಳಗೆ ಕರೆದು, ನಿನಗೆ ಭಯವಿಲ್ಲದಿದ್ದರೆ ಒಳಗಿನ ಚಾವಡಿಯಲ್ಲಿ ಮಲಗಿಕೋ ಎಂದು ಜಾಗ ಕೊಟ್ಟಿದ್ದ. ಹೊರಗಿರುವವರಿಗಿಂತ ಇಲ್ಲಿರುವವರೇ ವಾಸಿ ಎಂದು, ಅಂದಿನಿಂದ ಅಲ್ಲೇ ಒಂದು ಗೂಡು ಕಂಡುಕೊಂಡಿದ್ದಳು.

ತಾವು ತಿನ್ನುವುದಕ್ಕಿಂತಲೂ ಹೆಚ್ಚಾಗಿ ಚೆಲ್ಲುವವರು, ಚೆಲ್ಲಿದರೂ ಪರವಾಗಿಲ್ಲ ಒಬ್ಬರಿಗೆ ಕೈಯ್ಯೆತ್ತಿ ಕೊಡದವರು ಹಲವರು, ದೇವರು, ಪೂಜೆ, ಹೂವು ಹಣ್ಣು, ಹೀಗೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದರೂ ಒಂದಿನಿತು ದಾನ ಮಾಡದವರು, ಹೀಗೆ ಹಲವಾರು ರೀತಿಯ ಜನರನ್ನು ಅವಳು ಪ್ರತಿನಿತ್ಯ ನೋಡುತ್ತಿದ್ದಳು.

ಇವರ ನಡುವೆ ಹಲವರು ಕರುಣೆ, ದಯೆ ತುಂಬಿದವರೂ ಅಲ್ಲೊಬ್ಬರು, ಇಲ್ಲೊಬ್ಬರು ಇರುತ್ತಿದ್ದರು. ತಾವು ತಿನ್ನುವ ಮುನ್ನ ಯಾರಿಗಾದರೂ ಕೊಂಚ ನೀಡಿ, ನಂತರ ತಾವು ತಿನ್ನುವವರೂ ಇದ್ದರು.

****

ನೀರು ಕುಡಿದವಳು ಗೋರಿಗಳ ನಡುವೆ ಚಾವಡಿಯ ಕಡೆಗೆ ಹೆಜ್ಜೆ ಹಾಕಿದಳು. ಆಗ ತಾನೆ ಸಣ್ಣದಾಗಿ ಮಳೆ ಬಂದು ನಿಂತಿತ್ತು. ಸ್ಮಶಾಣದ ನಡುವೆ ಅಲ್ಲಲ್ಲಿ ಇದ್ದ ವಿದ್ಯುತ್ ದೀಪಗಳ ಬೆಳಕಿನಲ್ಲಿ ಸ್ವಚ್ಚವಾಗಿ ತೊಳೆದಿಟ್ಟಂತೆ ಗೋರಿಯ ಶಿಲೆಗಳು ಫಳ ಫಳ ಹೊಳೆಯುತ್ತಿದ್ದವು.

ಕಪ್ಪು ಶಿಲೆ, ಬಿಳಿ ಶಿಲೆ, ಅಮೃತ ಶಿಲೆ, ಕಡಪ ಕಲ್ಲು, ಸಾದಾ ಕಲ್ಲು, ಹೀಗೆ ಅನೇಕ ರೀತಿಯ ಕಲ್ಲುಗಳಲ್ಲಿ ನಿರ್ಮಿತವಾದ ಗೋರಿಗಳು ಅಲ್ಲಿದ್ದವು. ದೇವ ಪುರುಷ, ದೇವ ಮಾತೆ, ಕಿನ್ನರಿಯರು ಆ ಗೋರಿಗಳನ್ನು ಅಲಂಕರಿಸಿದ್ದರು. ಕೆಲವು ಗೋರಿಗಳನ್ನು ನಿರ್ಮಿಸಲು ಆಗಿದ್ದ ಖರ್ಚಿನಲ್ಲಿ, ಮಧ್ಯಮ ವರ್ಗದ ಕುಟುಂಬವು ಹಲವು ವರ್ಷಗಳ ಕಾಲ ಸಂಸಾರ ನಡೆಸಬಹುದಿತ್ತು.

ಬದುಕಿದ್ದಾಗ ಹೇಗಾದರೂ ನೋಡಿಕೊಂಡಿರಲಿ, ಸತ್ತ ಮೇಲೆ ಮಾತ್ರ ಇನ್ನಿಲ್ಲದಂತೆ ಹಣ ಸುರಿದು, ಗೋರಿಗಳನ್ನು ನಿರ್ಮಿಸಿ ತಮ್ಮ ಪ್ರೀತಿಯನ್ನು ತೋರಿದ್ದರು.

ಅಂದಿನ ದಿನವೇ ಕ್ರೈಸ್ತರಿಗೂ ವಿಶೇಷ ದಿನ. ತಮ್ಮ ಹಿರಿಯರ, ಅಗಲಿದವರ ಗೋರಿಗಳಿಗೆ ಭೇಟಿಯಿತ್ತು ಪೂಜೆ ಸಲ್ಲಿಸುವ ದಿನ.ಬೆಳಗ್ಗಿನಿಂದಲೂ ಸಾವಿರಾರು ಜನ ಬಂದು, ಮೃತರಿಗೆ ಗೌರವ ಸಲ್ಲಿಸಿ ಹೋಗಿದ್ದರು.ಬರುವ ಪ್ರತಿಯೊಬ್ಬರೂ ಗುಚ್ಚ ಗುಚ್ಚ ಹೂಗಳನ್ನು ಹಿಡಿದು ಬಂದಿದ್ದರು. ಅನೇಕ ಜಾತಿಯ ಹೂಗಳು, ಅನೇಕ ಬಣ್ಣದ ಹೂಗಳು, ಅನೇಕ ವಿನ್ಯಾಸಗಳಲ್ಲಿ ಕಟ್ಟಲಾಗಿದ್ದ ಹೂಗಳು ಗೋರಿಗಳನ್ನು ಅಲಂಕರಿಸಿದ್ದವು. ಸಣ್ಣದಾಗಿ ಮಳೆ ಬಿದ್ದಿತ್ತಾದ್ದರಿಂದ ಆ ಹೂಗಳಿಗೆ ನೀರು ಚಿಮುಕಿಸಿದಂತಾಗಿ, ಎಲ್ಲವೂ ಇನ್ನೂ ತನಿಯಾಗಿ, ಎಳಸಾಗಿ ಇದ್ದವು.

ಸೇವಂತಿಗೆ, ಗುಲಾಬಿ, ಡೇರೆ, ಸುಗಂಧರಾಜ, ಇವುಗಳೇ ಅಲ್ಲದೆ ಹೆಸರೇ ತಿಳಿಯದ ಅನೇಕ ಹೂಗಳು. ಬಿಳಿ, ಹಳದಿ, ಕೆಂಪು, ನೀಲಿ, ಹೀಗೆ ಎಷ್ಟೊಂದು ಬಣ್ಣದ ಹೂಗಳು.

ಅಂದು ಬೆಳಗ್ಗಿನಿಂದಲೂ ಹೆದ್ದಾರಿಯ ಬದಿಯಲ್ಲಿ, ರಾಶಿ ರಾಶಿ ಹೂಗಳು ಮಾರಾಟವಾಗುವುದನ್ನು ಅವಳು ಕಂಡಿದ್ದಳು. ಆ ದಾರಿಯಲ್ಲಿ ಸಾಗುವವರೆಲ್ಲರೂ ಅಲ್ಲಿ ಹೂಗಳನ್ನು ಕೊಳ್ಳುತ್ತಿದ್ದರು. ಸೈಕಲ್. ಸ್ಕೂಟರ್, ಕಾರು, ರಿಕ್ಷಾ ಎಲ್ಲವೂ ಅಲ್ಲಿ ನಿಂತು,

ಮುಂದಿನ ಪುಟ ನೋಡಿ ...

ಮುಂದೆ ಸಾಗುತ್ತಿದ್ದವು. ಹೂವಿನ ಬೆಲೆ ಗಗನಕ್ಕೇರಿತ್ತು, ಕೇಳಿದಷ್ಟು ಬೆಲೆ ಕೊಟ್ಟು ಹೂ ಕೊಳ್ಳುತ್ತಿದ್ದರು. ಗಂಟೆಗಳಲ್ಲಿ ಹೂವಿನ ರಾಶಿ ಕರಗಿ, ಮತ್ತೆ ತಂದು ತುಂಬಿಸುತ್ತಿದ್ದರು.

ಸತತವಾಗಿ ಎರಡು ಮೂರು ದಿನ ಹಬ್ಬಗಳು. ಮುಂದೆರಡು ದಿನ ಕೂಡ ಹೂವಿಗೆ ಇದೇ ರೀತಿಯ ಬೇಡಿಕೆ. ಅದೇ ಹಬ್ಬಗಳು ಮುಗಿದ ಕೂಡಲೇ ಕೇಳುವವರೇ ಇಲ್ಲವಾಗಿ, ಅದೆ ಜಾಗದಲ್ಲಿಯೇ ಹೂಗಳು ಕೊಳೆತು ನಾರಲಾರಂಭಿಸುತ್ತಿದ್ದವು. ಆ ಎರಡು ಮೂರು ದಿನಗಳಲ್ಲಿಯೇ ಹೂವಿನವರು ಸಾಕಷ್ಟು ಹಣ ಮಾಡಿಕೊಂಡಿರುತ್ತಿದ್ದವರು.

ಅಲ್ಲಿನ ಹೂಗಳನ್ನೆಲ್ಲಾ ನೋಡುತ್ತಾ ನಡೆದವಳಿಗೆ ಬದುಕುವ ದಾರಿಯೊಂದು ಕಂಡಿತ್ತು.

ಜ್ಞಾನಪ್ಪನ ಮನೆಯ ಬಳಿಗೆ ಬಂದವಳು, ಮುಂಬಾಗಿಲಿನ ಬಳಿ ಜೋಡಿಸಿಟ್ಟಿದ್ದ ಬಿದಿರಿನ ಬುಟ್ಟಿಗಳನ್ನು ತೆಗೆದುಕೊಂಡಳು. ಆಲ್ಲಲ್ಲಿ ಒಂದೊಂದರಂತೆ ಹೂವಿನ ಗುಚ್ಚಗಳನ್ನು ಆರಿಸಿಕೊಂಡು, ನಾಲ್ಕೈದು ದೊಡ್ಡ ದೊಡ್ಡ ಬುಟ್ಟಿಗಳಷ್ಟು ತುಂಬಿಸಿಕೊಂಡಳು. ಅಂದು ಅಲ್ಲಿ ಹೂಗಳ ಇರಿಸಿ ಹೋದವರು ಮತ್ತೆ ಬರುವುದು ಒಂದು ವರುಷದ ನಂತರವೇ.

ಮಾರನೆಯ ಮಧ್ಯಾನ್ಹದ ವೇಳೆಗೆ, ಮುಂದಿನ ದಿನಗಳಲ್ಲಿ ತಾನೇ ಹೂಗಳನ್ನು ಕೊಂಡು, ಪುಟ್ಟದಾಗಿ ವ್ಯಾಪಾರ ಮಾಡುವಷ್ಟು ಹಣ ಕೂಡಿತ್ತು. ಬದುಕಲೊಂದು ದಾರಿಯನ್ನು ಕಂಡ ಸಮಾಧಾನದಲ್ಲಿ, ಮಗುವಿನೊಡನೆ ಹೊಟ್ಟೆ ತುಂಬಾ ಉಂಡು, ಬೇರೊಂದು ಊರಿನೆಡೆ ಸಾಗಿದಳು. ▪

****

ಕ್ಲಿಕ್: ನಾಗಶೈಲ ಕುಮಾರ್

ಕ್ಲಿಕ್: ಬದರಿ ತ್ಯಾಮಗೊಂಡ್ಲು

ಆಸ್ಟ್ರೇಲಿಯಾದಲ್ಲಿ ವಸಂತಮಾಸವೀಗ

ಕ್ಲಿಕ್: ನಾಗಶೈಲ ಕುಮಾರ್

ಕ್ಲಿಕ್: ಬದರಿ ತ್ಯಾಮಗೊಂಡ್ಲು

ವಿಜ್ಞಾನ

ಮನೆಯಲ್ಲಿ ಅಗ್ನಿಪರ್ವತ

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಗ್ರಿ:

ಅಡುಗೆ ಸೋಡಾ – Baking Soda (ಬೇಕಿಂಗ್ ಪೌಡರ್ ಅಲ್ಲ)

ಒಂದು ಲೋಟದಷ್ಟು ವಿನೆಗರ್

ಒಂದು ಗಾಜಿನ ಲೋಟ, ಕೆಂಪು ಬಣ್ಣದ ಫುಡ್ ಕಲರ್

ವಿಧಾನ:

ಇದನ್ನು ಹಿರಿಯರೊಂದಿಗೆ ಮಾಡಿ. ಮನೆಯ ಹೊರಆವರಣದಲ್ಲಿ ಮಾಡಿದರೆ ಶುಚಿಗೊಳಿಸಲು ಸುಲಭ.

ಗಾಜಿನ ಲೋಟಕ್ಕೆ ಬೇಕಿಂಗ್ ಸೋಡಾ ಹಾಕಿ ಒಂದಷ್ಟು ತೊಟ್ಟು ಫುಡ್ ಕಲರ್ ಹಾಕಿ ಮುಖವನ್ನು ಗಾಜಿನ ಹತ್ತಿರ ಇಡದೆ, ಆದಷ್ಟು ದೂರದಿಂದ ನಿಧಾನವಾಗಿ ವಿನೆಗರನ್ನು ಲೋಟದ ಒಳಗೆ ಸುರಿಯುತ್ತಾ ಬನ್ನಿ ನೊರೆ ನೊರೆಯಾಗಿ ಅಗ್ನಿ ಪರ್ವತ ಬೆಂಕಿಯುಗುಳುವಂತೆ ರಸವು ಲೋಟದ ಮೇಲೇರಿ ಉಕ್ಕುತ್ತದೆ

ಏನಾಗುತ್ತಿದೆ:

ವಿನೆಗರ್ (ಅಸಿಟಿಕ್ ಆಸಿಡ್) ಆಸಿಡ್ ಆಗಿದ್ದು ಮತ್ತು ಅಡಿಗೆ ಸೋಡಾ (ಸೋಡಿಯಂ ಬೈಕಾಬ್ರೋನೇಟ್) ಬೇಸ್ ಆಗಿರುತ್ತದೆ. ಇವೆರಡರ ಮಿಶ್ರಣವಾದಾಗ ಅಸ್ಥಿರವಾದ ಕಾರ್ಬಾಲಿಕ್ ಆಸಿಡ್ ಉತ್ಪತ್ತಿಯಾಗಿ ನೀರು ಮತ್ತು ಕಾರ್ಬನ್ ಡೈ ಆಕ್ಸೈಡ್ ಆಗಿ ಮಾರ್ಪಾದಗುತ್ತದೆ. ಇದು ಹಿಸ್ಸೆಂದು ಶಬ್ದ ಮಾಡುತ್ತಾ ನೊರೆ ನೊರೆಯಾಗಿ ಮೇಲೇಳುತ್ತದೆ. ▪

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಸಿಡ್ನಿ ದಸರಾ ಬೊಂಬೆ ಹಬ್ಬ ಮತ್ತು ಸಂಗೀತ ಸಂಜೆ
(ಪುತ್ತೂರು ನರಸಿಂಹ ನಾಯಕರ ಗಾಯನ)

ಸ್ಥಳ: WattleGrove Public School, Cressbrook Drive, NSW 2173

ಸಮಯ: **04:30pm,** ದಿನ **: Sunday, 26th Oct 2014**

Bookings by Email: sugamakannada@yahoo.com.au
ಪ್ರವೇಶ : ಹಿರಿಯರು $15, ಮಕ್ಕಳು $10, ಕುಟುಂಬಕ್ಕೆ $30

Or Text your email to Narayana - 0423634979 Nagaraj - 0400836415
Shridhar - 0422549695

Sydney Kannada Sangha, celebrating
ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಕಾರಣೆ

Redgum function Center, Wentworthville NSW

08-11-2014 @ 5.30pm

More details http://www.kannada.org.au

Diya-licious Diwali
(ಸಹಾಯ ನಿಧಿ ಸಂಗ್ರಹಕ್ಕಾಗಿ)

Dinner & entertainment evening
ದಿನ: 18-10-2014
ಸಮಯ: 06:45 pm
ಸ್ಥಳ:CherryBrook Community Ctr
Shepers Drive, Cherrybrook NSW 2126

ಹೆಚ್ಚಿನ ವಿವರಗಳಿಗೆ http://vision2020.org.au/

ನಮ್ಮ
ಸುತ್ತಾ
ಮುತ್ತಾ

Deepavali Fair at Parramatta Park

Free Event

Parramatta Park, Parramatta

Sunday 19th Oct 2014
From 11:30 AM

www.deepavali.com.au

Contact:
Bhagwat: 0412076809
Rajiv: 0411195837

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.